ಸಂಪುಟ: ೦೭/ ಸಂಚಿಕೆ: ೧೬೪/ಶನಿವಾರ ದಿನಾಂಕ : ೧೬-೦೮-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 07/ ISSUE : 164/ SATURDAY Date : 16-08-2025/ RNI No. KARKAN/2019/77640/ Postal Reg No. PMG/KA/NK/BM/135/2025-27 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

### 79ನೇ ಸ್ವಾತಂತ್ರೋತ್ಸವ: ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ

## ಸ್ವಾತಂತ್ರ್ಯ ಹೋರಾಟದಲ್ಲಿ ಬೆಳಗಾವಿ ಜಿಲ್ಲೆ ಮುಂಚೂಣಿಯಲ್ಲಿತ್ತು: ಸಚಿವ ಸತೀಶ ಜಾರಕಿಹೊಳಿ

ಬೆಳಗಾವಿ, : ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಅಹಿಂಸಾತ್ಮಕ ಹೋರಾಟದ ಮೂಲಕ ಭಾರತೀಯರು ಗಳಿಸಿದ ಸ್ವಾತಂತ್ರ್ಯವು ಜಗತ್ತಿನ ರಾಜಕೀಯ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದೆ. ಜಗತ್ತಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ಬೆಳಗಾವಿ ಜಿಲ್ಲೆಯ ಪಾತ್ರವು ಕಡಿಮೆ ಇಲ್ಲ. ಅಪ್ರತಿಮ ಹೋರಾಟಗಾರರು, ಅಪ್ಪಟ ದೇಶಭಕ್ತರು, ಸ್ವಾಭಿಮಾನಿ ಸೇನಾನಿಗಳನ್ನು ದೇಶಕ್ಕೆ ಕೊಡುಗೆ ನೀಡಿರುವ ನಮ್ಮ ಜಿಲ್ಲೆಯು ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿತ್ತು ಎಂದು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ತಿಳಿಸಿದರು.



ನಗರದ ಜಿಲ್ಲಾ ಕ್ರಿಡಾಂಗಣದಲ್ಲಿ ಶುಕ್ರವಾರ (ಆ.15) 79ನೇ ಸ್ವಾತಂತ್ರೋತ್ಸವ ದಿನದ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೇರವೆರಿಸಿ ಅವರು ಮಾತನಾಡಿದರು.

ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಮ್ಮ ಸರ್ಕಾರವು ಅನೇಕ ಜನಪರ ಕಾರ್ಯಕ್ರಮಗಳನ್ನು ರೂಪಿಸಿದೆ. ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ಹಾದಿಯಲ್ಲಿ ದೃಢವಾದ ಹೆಜ್ಜೆಯನ್ನು ಇಟ್ಟಿದೆ. ಜನರಿಗೆ ನೀಡಿದ ಭರವಸೆಯಂತೆ ಐದು ಗ್ಯಾರಂಟಿ ಯೋಜನೆಗಳಾದ ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ ಹಾಗೂ ಯುವನಿಧಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರ ಜತೆಗೆ ರಾಜ್ಯದ ಸರ್ವತೋಮುಖ ಪ್ರಗತಿಗೆ ಶ್ರಮಿಸುತ್ತಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಪಥ ಸಂಚಲನ: ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಿದ 79ನೇ ಸ್ವಾತಂತ್ರೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ರಾಷ್ಟ್ರ ಧ್ವಜಾರೋಹಣ ನೆರವೆರಿಸಿ ಪೊಲಿಸ್, ಅಗ್ನಿಶಾಮಕ ಸೇರಿದಂತೆ ವಿವಿಧ ತಂಡಗಳಿಂದ ಗೌರವ ವಂದನೆ ಸ್ವೀಕರಿಸಿದರು. ತದ ನಂತರ ಆರ್.ಪಿ.ಐ ಜೆ.ಹೆಚ್.ಶೇಖ ಅವರ ನೇತೃತ್ವದಲ್ಲಿ ಜರುಗಿದ ಸಿ.ಎ.ಆರ್.ಡಿ.ಎ.ಆರ್., ಮಹಿಳಾ ಹಾಗೂ ಪುರುಷ ನಾಗರಿಕ ಪೋಲಿಸ್ ತುಕಡಿ, ಗೃಹರಕ್ಷಕ ದಳ, ಮಹಿಳಾ ಹಾಗೂ ಪುರುಷ ಕೆ.ಎಸ್.ಆರ್.ಪಿ ಪಡೆ, ಅಬಕಾರಿ ಇಲಾಖೆ, ಅಗ್ನಿಶಾಮಕ ಇಲಾಖೆ, ಎಸ್.ಸಿ.ಸಿ. ಬಾಯ್ಸ್ ಮತ್ತು ಗರ್ಲ್ಸ, ಪೌರ ಕಾರ್ಮಿಕರು, ಅಗಸಗಾ ಎಸ್.ಎಲ್.ವಿ.ಕೆ. ಪ್ರೌಢ ಶಾಲೆಯ ಭಾರತ ಸೇವಾದಳ, ಲಿಟಲ್ ಸ್ಕಾಲರ್ ಅಕಾಡಮಿ, ವನಿತಾ ವಿದ್ಯಾಲಯ, ಕ್ಯಾಂಟೋನಮೆಂಟ್ ಪ್ರೌಢಶಾಲೆ, ಸೆಂಟ ಜೊಸೆಫ ಪ್ರೌಢಶಾಲೆ, ಮಾರಾಠ ಮಂಡಳ ಸೆಂಟ್ರಲ್ ಪ್ರೌಢಶಾಲೆ,, ಕೆ.ಎಲ್.ಇ. ಇಂಟ-ನ್ಯಾಸನಲ್ ಪ್ರೌಢಶಾಲೆ, ಮುರಾರ್ಜಿ ದೇಸಾಯಿ ವಸತಿ ಶಾಲೆ, ಚಂಪಾಬಾಯಿ ಭೋಗಲೆ ಬಾಲಕಿಯರ ಪ್ರೌಢಶಾಲೆ, ಕೆ.ಎಸ್.ಆರ್.ಪಿ ಮಚ್ಛೆ ಪ್ರೌಢ ಸಾಲೆ, ಬೆಳಗಾವಿ ಪಬ್ಲಿಕ ಸ್ಕೂಲ್, ಸರಕಾರಿ ಪ್ರೌಢಶಾಲೆ ಕಂಗ್ರಾಳಿ, ಬಿ.ಕೆ, ವಂಟಮೂರಿ, ಮಹೇಶ್ವರಿ ಅಂ-ಧ ಮಕ್ಕಳ ಶಾಲಾ ವಿದ್ಯಾರ್ಥಿಗಳ ತಂಡಗಳ ಆಕರ್ಷಕ ಪಥ ಸಂಚಲನ ಸಭಿಕರ ಪ್ರಶಂಸೆಗೆ ಪಾತ್ರವಾದವು.

ಸನ್ಮಾನಿತರು: 79ನೇ ಸ್ವಾತಂತ್ರೋತ್ಸವ ದಿನಾಚರಣೆಯ ಪ್ರಯುಕ್ತ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದದ ಜಿಲ್ಲೆಯ ಸಾಧಕರಿಗೆ ಸನ್ಮಾನಿಸಲಾಯಿತು. ಸಾವಯವ ಕೃಷಿಯಲ್ಲಿ ಸಾಧನೆಗೈದ ತುಕಾರಾಮ ಮಾರುತಿ ನಾಯಿಕ, ಶ್ರೀಮತಿ ಲಕ್ಷ್ಮೀ ಲೋಕೂರ, ಸಮಾಜ ಸೇವೆ ಕ್ಷೇತ್ರದಲ್ಲಿ ಡಾ.ಸುಶಿಲಾದೇವಿ ರಾಮನ್ನವರ, ಫಜಲ್, ಶೈಕ್ಷಣಿಕ ಕ್ಷೇತ್ರದಲ್ಲಿ ತನ್ವಿ ಹೇಮಂತ ಪಾಟೀಲ, ರೂಪಾ ಚನ್ನಗೌಡ ಪಾಟೀಲ, ಕ್ರೀಡಾ ಕ್ಷೇತ್ರದಲ್ಲಿ ಸಾಕ್ಷಿ ಮಲ್ಲು ಪಾಟೀಲ, ಚಿನ್ಮಯ ಕ್ಯಾಮಣ್ಣವರ, ಸೊನಮ ಮಲ್ಲು ಪಾಟೀಲ, ಅಮೋಘ ತಂಗಡಿ, ರಮ್ಯಾ ಲಮಾಣಿ, ಪ್ರಜ್ವಲ ಹನುಮನಟ್ಟಿ, ಸೌಂದರ್ಯ ದಂಡಿನವರ, ಸುಕೃತ ಯಳಹಟ್ಟಿ, ಸುದರ್ಶನ ಗುರವ, ವಿನೋದ ಮೇತ್ರಿ, ತನಿಷ್ಕಾ ಕಾಲಬೈರವ, ಬಿ.ವಿ.ಕಿರಣ, ಸರಣ್ಯಾ ಕುಂಬಾರ, ಸ್ವಾತಿ ಪಾಟೀಲ, ಸಂಜನಾ ಶೇಟ್, ತೀರ್ಥ ಪಾಚ್ಛಾಪೂರ, ಸಾಯಿಶ್ವರಿ ಜೆ.ಕೆ, ಗಂಗಯ್ಯ ಚಿಕ್ಕಮಠ, ಮಲ್ಲಿಕಾರ್ಜುನ ಬಬಲಿ, ಸುಧಾಕರ ಚಳಕೆ, ತನೋಜ ಸಿಂಗ್, ಗಾಯತ್ರಿ ಬೆಳಗಾವಿ, ಸುರೇಶ ಲಂಗೋಟಿ, ಯುವರಾಜ ಮೋಹನೆಕರ ಅವರುಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಸೇರಿದಂತೆ ಗಣ್ಯರು ಸನ್ಮಾನಿಸಿದರು.

ಶಾಸಕರಾದ ಆಸೀಫ್(ರಾಜು) ಸೇಠ, ಮಹಾನಗರ ಪಾಲಿಕೆ ಮಹಾಪೌರ ಮಂಗೇಶ ಪವಾರ, ಉಪ ಮಹಾಪೌರೆ ವಾಣಿ ಜೋಶಿ, ವಿಧಾನ ಪರಿಷತ್ ಸದಸ್ಯರಾದ ಸಾಬಣ್ಣ ತಳವಾರ, ನಗರ ಸೇವಕರು, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಪೋಲಿಸ್ ಆಯುಕ್ತ ಭೂಷಣ ಗುಲಾಬರಾವ್ ಭೋರಸೆ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ, ಅಪರ ಜಿಲ್ಲಾಧಿಕಾರಿ ವಿಜಯಕುಮಾನರ ಹೊನಕೇರಿ, ಉಪವಿಭಾಗಾಧಿಕಾರಿ ಶ್ರವಣ ನಾಯಕ್, ತಹಶೀಲ್ದಾರ ಬಸವರಾಜ ನಾಗರಾಳ ಸೇ-ರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ಸಾರ್ವಜನಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಇದಕ್ಕೂ ಮುಂಚೆ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜನ್ಮ ದಿನಾಚರಣೆ ಅಂಗವಾಗಿ ನ್ಯಾಯಾಲಯ ಆವರಣದ ಸಂಗೊಳ್ಳಿ ರಾಯಣ್ಣ ಹಾಗೂ ಚನ್ನಮ್ಮ ವೃತ್ತದ ಕಿತೂರು ರಾಣಿ ಚನ್ನಮ್ಮ ಅವರುಗಳ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಮರ್ಪಿಸಿದರು.

## ಧರ್ಮಸ್ಥಳ ಪ್ರಕರಣದಲ್ಲಿ ಸುಳ್ಳು ಹೇಳಿ- ಅಪಪ್ರಚಾರ ಮಾಡಿದವರ ವಿರುದ್ಧ ಕ್ರಮಕ್ಕೆ ಸರಕಾರ ಚಿಂತನೆ : ಡಿಸಿಎಂ ಡಿ.ಕೆ.ಶಿವಕುಮಾರ್




ಬೆಂಗಳೂರು, ಆ.15 : "ಧರ್ಮಸ್ಥಳ ಪ್ರಕರಣದಲ್ಲಿ ಸುಳ್ಳು ಹೇಳಿ, ಅಪಪ್ರಚಾರ ಮಾಡಿದವರ ವಿರುದ್ಧ ಕ್ರಮಕ್ಕೆ ಸರಕಾರ ಚಿಂತನೆ ನಡೆಸಿದೆ" ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು. ಕೆಪಿಸಿಸಿ ಕಚೇರಿ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶುಕ್ರವಾರ ಪ್ರತಿಕ್ರಿಯೆ ನೀಡಿದರು.

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದಾಗ, "ಇದು ಧರ್ಮಸ್ಥಳದ ಪರ ಅಥವಾ ವಿರುದ್ಧದ ವಿಚಾರವಲ್ಲ. ಎಲ್ಲಾ ಪ್ರಕ್ರಿಯೆ ನ್ಯಾಯಬದ್ಧವಾಗಿ ನಡೆಯಬೇಕು. ಧರ್ಮಸ್ಥಳವನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅಲ್ಲಿನ ಭಕ್ತಿ, ಶ್ರದ್ಧೆ ಪ್ರಕ್ರಿಯೆಗಳ ಮೇಲೆ ನನಗೆ ನಂಬಿಕೆ, ಆತ್ಮವಿಶ್ವಾಸವಿದೆ. ಮುಂದಿನ ದಿನಗಳಲ್ಲಿ ತನಿಖೆಯಿಂದ ಅಲ್ಲಿ ನಡೆದಿರುವ ಷಡ್ಯಂತ್ರ ಹೊರಬರಲಿದೆ ಎಂಬ ವಿಶ್ವಾಸ ನನ್ನದು. ಈ ಪ್ರಕರಣದ ವಿಚಾರವಾಗಿ ನಮ್ಮ ಗೃಹ ಸಚಿವರು ಅಧಿವೇಶನದಲ್ಲಿ ಉತ್ತರ ನೀಡುವ ಮೂಲಕ ರಾಜ್ಯದ ಮುಂದೆ ಸತ್ಯಾಂಶ ಇಡಲಿದ್ದಾರೆ" ಎಂದು ತಿಳಿಸಿದರು.

ಇಲ್ಲಿ ಷಡ್ಯಂತ್ರ ನಡೆದಿದೆಯೇ ಎಂದು ಕೇಳಿದಾಗ, "ಈ ವಿಚಾರವನ್ನು ಗೃಹ ಸಚಿವರೇ ವಿವರಿಸಲಿದ್ದಾರೆ. ಮುಖ್ಯಮಂತ್ರಿಗಳಿಗೂ ಈ ವಿಚಾರದಲ್ಲಿ ಬದ್ಧತೆ ಇದೆ. ಯಾರೂ ಕೂಡ ಸುಳ್ಳು, ಷಡ್ಯಂತ್ರ ಮೂಲಕ ಅಪಮಾನ, ಅಪಪ್ರಚಾರ ನಡೆಸುವಂತಿಲ್ಲ ಎಂದು ಸಿಎಂ ನಮಗೆ ಶಾಸಕಾಂಗ ಪಕ್ಷದ ಸಭೆಯಲ್ಲಿ ತಿಳಿಸಿದ್ದಾರೆ. ಸುಳ್ಳು ಆರೋಪ ಮಾಡಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ನಾವು ನಡೆಯುತ್ತೇವೆ. ಕಾನೂನು ಎಲ್ಲರಿಗೂ ಒಂದೇ. ನಾವು ಅದನ್ನು ಕಾಪಾಡಬೇಕು. ಇಲ್ಲಿ ನಾವು ಯಾರನ್ನೂ ರಕ್ಷಣೆ ಮಾಡುವುದಿಲ್ಲ. ಅನಗತ್ಯವಾಗಿ ಯಾರ ತೇಜೋವಧೆ ಮಾಡುವಂತಿಲ್ಲ" ಎಂದು ತಿಳಿಸಿದರು.

## 79ನೇ ಸ್ವಾತಂತ್ರ್ಯ ದಿನ: ಭಾರತದ ಅಖಂಡತೆ ದೇಶದೊಳಗಿರುವ ಸಾಂವಿಧಾನಿಕ ಸಂಸ್ಥೆಯ ಪಾವಿತ್ರ್ಯ ಕಾಪಾಡುವುದಕ್ಕೂ ಅನ್ವಯಿಸುತ್ತದೆ; ಮುಖ್ಯಮಂತ್ರಿ



ಬೆಂಗಳೂರು: 79ನೇ ಸ್ವಾತಂತ್ರ್ಯ ಸಂಭ್ರಮ ಎಲ್ಲೆಡೆ ಮನೆ ಮಾಡಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭಾಶಯಗಳನ್ನು ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ನಾಡಿನ ಸಮಸ್ತೆ ಜನತೆಗೆ 79ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು ಇಂದು ಭಾರತವು ಬ್ರಿಟಿಷರ ವಸಾಹತುಶಾಹಿ ಆಡಳಿತದಿಂದ ಮುಕ್ತಗೊಂಡ ಶುಭದಿನ. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್, ಮೌಲಾನಾ ಅಬುಲ್ ಕಲಾಂ ಅಜಾದ್ ಮುಂತಾದ ಕೆಚ್ಚೆದೆಯ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರ ನೇತೃತ್ವದಲ್ಲಿ ದೇಶಾದ್ಯಂತ ಲಕ್ಷಾಂತರ ಹೋರಾಟಗಾರರು ತಮ್ಮ ತ್ಯಾಗ, ಬಲಿದಾನದ ಮೂಲಕ 1947ರ ಆಗಸ್ಟ್ 15ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು. ದೇಶದ ನಾಳೆಗಳನ್ನು ರೂಪಿಸುವ ಸಲುವಾಗಿ ತಮ್ಮ ಇಂದಿನ ಬದುಕನ್ನೇ ತ್ಯಾಗ ಮಾಡಿದ ಆ ಎಲ್ಲ ಮಹನೀಯರನ್ನು ನಾವು ಇಂದು ಮನದುಂಬಿ ಸ್ಮರಿಸೋಣ ಎಂದು ಹೇಳಿದ್ದಾರೆ.

ಭಾರತದ ಸ್ವಾತಂತ್ರ್ಯವು ಅಖಂಡವಾಗಿಯೂ, ಸಮಗ್ರವಾಗಿಯೂ ಸದಾಕಾಲ ನಳನಳಿಸಬೇಕೆಂದರೆ ನಮ್ಮ ಸಂವಿಧಾನದ ಮೂಲ ತತ್ವಗಳಾದ ಸಾರ್ವಭೌಮತೆ, ಪ್ರಜಾಸತ್ತಾತ್ಮತೆ, ಸಮಾಜವಾದ, ಜಾತ್ಯತೀತತೆ, ಸ್ವತಂತ್ರ ನ್ಯಾಯಾಂಗ, ರಾಜ್ಯ ನಿರ್ದೇಶಕ ತತ್ವಗಳು, ಒಕ್ಕೂಟ ತತ್ವಗಳು ಇದಾವುದೂ ಒಂದಿನಿತೂ ಮುಕ್ಕಾಗದಂತೆ ಎಚ್ಚರವಹಿಸಬೇಕು. ಭಾರತದ ಅಖಂಡತೆಯ ರಕ್ಷಣೆಯೆನ್ನುವುದು ಕೇವಲ ದೇಶದ ಗಡಿಗಳ ರಕ್ಷಣೆಗೆ ಮಾತ್ರವೇ ಸೀಮಿತವಲ್ಲ. ಬದಲಿಗೆ ದೇಶದೊಳಗಿರುವ ಪ್ರತಿಯೊಂದು ಸಾಂವಿಧಾನಿಕ ಸಂಸ್ಥೆಯ ಪಾವಿತ್ರ್ಯವನ್ನು ಕಾಪಾಡುವುದಕ್ಕೂ ಅನ್ವಯಿಸುತ್ತದೆ.

ಸ್ವತಂತ್ರ ನ್ಯಾಯಾಂಗ, ಸ್ವತಂತ್ರ ಸಾಂವಿಧಾನಿಕ ಸಂಸ್ಥೆಗಳು, ನಿರ್ಭೀತ ತನಿಖಾ ಸಂಸ್ಥೆಗಳು ಇವೆಲ್ಲವೂ ಸ್ವತಂತ್ರ ಭಾರತದ ಹೆಗ್ಗುರುತುಗಳಾಗಿವೆ. ಇವುಗಳ ಪಾವಿತ್ರ್ಯಕ್ಕೆ ಧಕ್ಕೆ ಒದಗಿದರೆ ದೇಶದ ಸ್ವಾತಂತ್ರ್ಯಕ್ಕೇ ಧಕ್ಕೆ ಒದಗಿದಂತೆ.

ಹಾಗಾಗಿ, ಯಾವುದೇ ಬೆಲೆ ತೆತ್ತಾದರೂ ಸರಿಯೇ ಇವುಗಳನ್ನು ಮೂಲಸ್ವರೂಪದಲ್ಲಿಯೇ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಸ್ವಾತಂತ್ರ್ಯದ ಪರಿಕಲ್ಪನೆಯನ್ನು ನಾವು ಇಂದು ಹೆಚ್ಚು ವಿಸ್ತಾರವಾಗಿ ವ್ಯಾಖ್ಯಾನಿಸಿಕೊಂಡು ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥ-ಪೂರ್ಣವಾಗಿಸಬೇಕಿದೆ. ಮತ್ತೊಮ್ಮೆ ಎಲ್ಲರಿಗೂ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು ಎಂದು ತಿಳಿಸಿದ್ದಾರೆ.

## ಅನಧಿಕೃತ ಚರ್ಮ ರೋಗ ಚಿಕಿತ್ಸಾ ಕೇಂದ್ರಗಳ ಮೇಲೆ ಆರೋಗ್ಯ ಇಲಾಖೆ ದಾಳಿ



ಬೆಳಗಾವಿ : ಬೆಳಗಾವಿಯಲ್ಲಿರುವ ಅನಧಿಕೃತ ಚರ್ಮ ರೋಗ ಚಿಕಿತ್ಸಾ ಕೇಂದ್ರಗಳ ಮೇಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಇಂದು(ಆ.15) ದಾಳಿ ನಡೆಸಿದ್ದು, 10 ಕೇಂದ್ರಗಳನ್ನು ಸೀಝ್ ಮಾಡುವ ಮೂಲಕ ಮಾಲಕರಿಗೆ ಬಿಸಿ ಮುಟ್ಟಿಸಿದ್ದಾರೆ.

ದಾಳಿ ವೇಳೆ 10 ಕೇಂದ್ರಗಳನ್ನು ಸೀಝ್ ಮಾಡಿದ್ದರೆ, 7 ಕೇಂದ್ರಗಳಿಗೆ ನೋಟಿಸ್ ನೀಡಲಾಗಿದೆ. ಅದೇ ರೀತಿ 7 ಕೇಂದ್ರಗಳು ಬಾಗಿಲು ತೆರೆದಿರಲಿಲ್ಲ. 6 ಕೇಂದ್ರಗಳಲ್ಲಿ ಯಾವುದೇ ನ್ಯೂನತೆಗಳು ಕಂಡು ಬಂದಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿ ಮುಹಮ್ಮದ್ ರೋಷನ್ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಬೆಳಗಾವಿಯಲ್ಲಿ ಸಣ್ಣ ಸಣ್ಣ ಅಂಗಡಿಗಳಲ್ಲಿ ಡರ್ಮಟೊಲಾಜಿಕಲ್ ಚಿಕಿತ್ಸೆ ನೀಡುತ್ತೇವೆ ಎಂದು ಬೋರ್ಡ್ ಹಾಕಿಕೊಂಡು ಪ್ಲಾಸ್ಮಾ ಥೆರಪಿ, ಹೇರ್ ಪ್ಲಾಂಟ್ ಸರ್ಜರಿ ಮತ್ತು ಲೇಸರ್ ಚಿಕಿತ್ಸೆ ಸೇರಿ ಮತ್ತಿತರ ಸರ್ಜರಿ ಮಾಡುತ್ತಿರುವ ಬಗ್ಗೆ ಡರ್ಮಟೊಲಾಜಿಕಲ್ ಅಸೋಸಿಯೇಷನ್ ಸೇರಿದಂತೆ ಹಲವು ವೈದ್ಯ-ರಿಂದ ಈ ಸಂಬಂಧ ದೂರು ಕೇಳಿ ಬಂದಿದ್ದವು. ಹಾಗಾಗಿ, ಸುಮಾರು 30 ಕಡೆಗಳಲ್ಲಿ ಕೆಪಿಎಂಇ ಕಾನೂನಿನ ಅಡಿಯಲ್ಲಿ ದಾಳಿ ಮಾಡಲಾಗಿದೆ ಎಂದರು.

ಆರೋಗ್ಯ ಇಲಾಖೆ ಅಧಿಕಾರಿಗಳು 30 ಸ್ಥಳಗಳಲ್ಲಿ 30 ತಂಡಗಳು ದಾಳಿ ಮಾಡಿ ಪರಿಶೀಲನೆ ಮಾಡಿದ್ದಾರೆ. ಇಲ್ಲಿ ಏನೇನು ಸಾಕ್ಷ್ಯಗಳು ಸಿಗುತ್ತವೆ ಎಂಬ ಬಗ್ಗೆ ಒಂದು ಪ್ರಾಥಮಿಕ ವರದಿ ತರಿಸಿಕೊಂಡು, ಅವುಗಳ ಬಗ್ಗೆ ನನ್ನ ಅಧ್ಯಕ್ಷತೆಯ ಕೆಪಿಎಂಇ ಕೋರ್ಟ್ ನಲ್ಲಿ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಯಾರು ಕಾನೂನು ಬಾಹಿರವಾಗಿ ಮತ್ತು ಬಹಿರಂಗವಾಗಿ ಕೆಲಸ ಮಾಡುತ್ತಿದ್ದಾರೋ, ಅವರಿಗೆ ಶಿಕ್ಷೆ ಕೊಡಿಸಲು ನಾವು ನಿರ್ಧರಿಸಿದ್ದೇವೆ. ಅಮಾಯಕ ಜನರ ಜೀವವನ್ನು ಈ ರೀತಿ ಅಪಾಯದ ಸ್ಥಿತಿಗೆ ನೂಕುವುದನ್ನು ನಾವು ಸಹಿಸುವುದಿಲ್ಲ. ಹೇರ್ ಕಟ್ ಮತ್ತು ಮೇಕಪ್ ಮಾಡುವುದನ್ನು ಬಿಟ್ಟರೆ ಈ ರೀತಿ ದೊಡ್ಡ ದೊಡ್ಡ ಸರ್ಜರಿ ಮಾಡಲು ಇವರಿಗೆ ಅನುಮತಿ ಇರುವುದಿಲ್ಲ. ಇದರಿಂದಾಗಿ ಅದೆಷ್ಟೋ ಜನರು ವ್ಯತಿ-ರಿಕ್ತ ಪರಿಣಾಮ ಉಂಟಾಗಿ ಮೃತರಾಗುತ್ತಿದ್ದಾರೆ. ಆ ರೀತಿ ಸಾವು-ನೋವು ನಮ್ಮಲ್ಲಿ ಸಂಭವಿಸಬಾರದು ಎಂಬ ಉದ್ದೇಶದಿಂದ ಕಾರ್ಯಾಚರಣೆ ಕೈಗೊಂಡಿದ್ದೇವೆ ಎಂದು ಅವರು ತಿಳಿಸಿದರು.




# ಸ್ವಾತಂತ್ರ್ಯವನ್ನು ಗೌರವಿಸೋಣ- ದೇಶ ರಕ್ಷಣೆ ಮಾಡೋಣ : ಎಫ್ ಎಸ್ ಸಿದ್ದನಗೌಡರ



ಬೈಲಹೊಂಗಲ: ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟ ಮಾಡುವದರೊಂದಿಗೆ ಯರವಾಡ ಜೈಲು ವಾಸಿಯಾಗಿದ್ದ ಗ್ರಾಮದ ನೂರಾರು ಸ್ವಾತಂತ್ರ್ಯ ಹೊರಾಟಗಾರರ ಆದರ್ಶ ಜೀವನ ಮಂದಿನ ಪೀಳಿಗೆಗೆ ತತ್ವಾದರ್ಶಗಳು ಅನುಕರಣೆಯಾಗಲೆಂದು ಪ್ರತಿವರ್ಷ ಅ14ರಂದು ಮಧ್ಯರಾತ್ರಿ ಧ್ವಜಾರೋಹಣ ಮಾಡಲಾಗುತ್ತಿದೆ ಎಂದು ನ್ಯಾಯವಾದಿ ಎಫ್ ಎಸ್ ಸಿದ್ದನಗೌಡರ ಹೇಳಿದರು.

ಗುರುವಾರ ಮಧ್ಯರಾತ್ರಿ ಹಮ್ಮಿಕೊಂಡಿದ್ದ ಅಖಂಡ ಭಾರತ ಸಂಕಲ್ಪದಿನ ಹಾಗೂ ಗ್ರಾಮದ 215 ಕ್ಕೂ ಹೆಚ್ಚಿನ ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆಯ ಕಾರ್ಯಕ್ರಮದಲ್ಲಿ ಮಾತನಾಡಿ,

ಗ್ರಾಮದ ಯುವಕರು ಉತ್ತಮ ರೀತಿಯಲ್ಲಿ ಸುಶಿಕ್ಷಿತರಾಗಿ ತಮ್ಮ ಜೀವನದಲ್ಲಿ ಸಾಧನೆಯ ಉತ್ತುಂಗಕ್ಕೆರಬೇಕು. 79ನೇ ಸ್ವಾತಂತ್ರ್ಯೋತ್ಸವವನ್ನು ಆಚ-ರಣೆಯಲ್ಲಿದ್ದು ನಮ್ಮ ಹಿರಿಯರ ತ್ಯಾಗ ಬಲಿದಾನದಿಂದ ಭಾರತ ಬ್ರೀಟಿಷರ ದಾಸ್ಯದಿಂದ ಮುಕ್ತವಾಗಿದೆ. ಅವರು ತಂದು ಕೊಟ್ಟ ಸ್ವಾತಂತ್ರ್ಯವನ್ನು ಪ್ರತಿಯೊಬ್ಬರು ಗೌರವಿಸೋಣ, ದೇಶದ ರಕ್ಷಣೆ ಕಾನೂನು ಸುವ್ಯವಸ್ಥೆಯ ಪಾಲನೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಧ್ವಜಾರೋಹಣ ನೆರವೆರಿಸಿ ಸೋಮಶೇಖರ ವಣ್ಣುರ ಮಾತನಾಡಿ, 1905 ರಲ್ಲಿ ರಾಷ್ಟ್ರಾಭಿಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬ್ರೀಟಿಷರ್ ವಿರುದ್ದ ಹೋರಾಟ ಮಾಡಿ ಯರವಾಡ ಜೈಲುವಾಸ ಅನುಭವಸಿದ ಸ್ವಾತಂತ್ರ್ಯ ಹೊರಾಟಗಾರರನ್ನು ಪ್ರತಿಯೊಬ್ಬರು ಸ್ಮರಣೆ ಮಾಡಬೇಕಾಗಿದೆ. ಗ್ರಾಮಸ್ಥರ ಹೋರಾಟದ ಮನೊಭಾವನೆ ಕಂಡು ಗ್ರಾಮಕ್ಕೆ ಗಾಂಧೀಜಿ ಅಗಮಿಸಿ 93 ವರ್ಷವಾಗಿದೆ. ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಆಗಮಿಸಿ 92 ವರ್ಷ ಸಂದಿದೆ. ಬಾಲಗಂಗಾಧರ ತಿಲಕರು ಗ್ರಾಮಕ್ಕೆ ಬಂದು 120 ವರ್ಷ ಸಂದಿರುವ ಪ್ರಯುಕ್ತ ಪ್ರತಿ ವರ್ಷ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿ ಅಗಸ್ಟ್ 14 ರಂದು ಮಧ್ಯರಾತ್ರಿ12 ಘಂಟೆಗೆ ಧ್ವಜಾರೋಹಣ ಮಾಡುವ ಮೂಲಕ ಸ್ವಾತಂತ್ರ್ಯೋತ್ಸವ ಅಚ-ರಿಸುತ್ತಾ ಬಂದಿರುವದು ನಮ್ಮೂರಿನ ಹೆಮ್ಮೆ. ಸ್ವಾತಂತ್ರ್ಯ ಹೋರಾಟದಲ್ಲಿ ಗ್ರಾಮದ ಹೆಣ್ಣು ಮಕ್ಕಳು ಪಾಲ್ಗೊಂಡಿರುವದು ಈ ಗ್ರಾಮದ ವಿಶೇಷವಾಗಿದ್ದು 215ಕ್ಕೂ ಹೆಚ್ಚು ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಂಡಿರುವದು ನಮಗೆಲ್ಲ ಆದರಣಿಯ ಸ್ವಾತಂತ್ರ್ಯ ಹೋರಾಟದಲ್ಲಿ ಈ ಗ್ರಾಮಕ್ಕೆ 3 ಮಹಾನ್ ನಾಯಕರು ಆಗಮಿಸಿದ ಇತಿಹಾಸ ಹೊಂದಿದ ಹೊಸೂರಿನಲ್ಲಿ ಇಷ್ಟೊಂದು ಅದ್ದೂರಿಯಾಗಿ ಪ್ರತಿವರ್ಷ ಮಧ್ಯರಾತ್ರಿ ಧ್ವಜಾರೋಹಣ ಕಾರ್ಯಕ್ರಮ ಗ್ರಾಮದ ಘನತೆಯನ್ನು ಹೆಚ್ಚಿಸಿದೆ ಎಂದರು. ಗ್ರಾಮದ ಸೋಮಲಿಂಗಪ್ಪ ಕೊಟಗಿ, ಗೌಡಪ್ಪ ಹೊಸಮನಿ, ಮಂಜುನಾಥ ಬುಡಶೆಟ್ಟಿ, ಶಿವಾನಂದ ಬೋಳೆತ್ತಿನ, ನಾಗರಾಜ ಬುಡಶೆಟ್ಟಿ, ಗಂಗಾಧರಗೌಡ ಸಿದ್ದನಗೌಡರ, ಸಂಜು ಸಂಗೊಳ್ಳಿ, ಶಿವಾನಂದ ಅಪ್ಪೋಜಿ, ಸುನಿಲ್ ಸೊಗಲ, ಪ್ರಮೋದ ವಕ್ಕುಂದ, ಪೃಥ್ವಿಗೌಡ ಸಿದ್ದನಗೌಡರ, ಸುರೇಶ ಗುಳಣ್ಣವರ, ನಾಗರಾಜ ಚಿಕ್ಕೊಪ್ಪ, ಆಕಾಶ ತೇಲಿ, ಶಿವಾನಂದಗೌಡ ಸಿದ್ದನಗೌಡರ, ಮಂಜುನಾಥ ಬೋಳೆತ್ತಿನ, ಮಲ್ಲಿಕಾರ್ಜುನ ಚಿಕ್ಕೊಪ್ಪ, ರಮೇಶ ಬೋಳೆತ್ತಿನ, ಹಾಗೂ ಅನೇಕ ದೇಶಭಕ್ತರು ಸೇರಿದ್ದರು. ಮುರಗೋಡ ಠಾಣೆಯ ಎಎಸ್ಐ ಗಂಗಾಧರ ಆಲದಕಟ್ಟಿ, ಎಫ್.ಎಮ್.ಮದ್ಲಿ ಉಪಸ್ಥಿತರಿದ್ದರು.

# ಸತ್ತಿಗೇರಿ ಗ್ರಾಮದಲ್ಲಿ ಸಂಭ್ರಮದ 79 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ



ಯರಗಟ್ಟಿ: ಸಮೀಪದ ಸತ್ತಿಗೇರಿ ಗ್ರಾಮದಲ್ಲಿ 79 ನೆ ಸ್ವಾತಂತ್ರೋತ್ಸವ ದಿನಾಚರಣೆಯ ಪ್ರಯುಕ್ತ ಸ್ಥಳೀಯ ಮಳಿಮಲ್ಲೇಶ್ವರ ಶ್ರೀಮಠದ ಹತ್ತಿರ ಸಾರ್ವಜನಿಕ ಧ್ವಜಾರೋಹಣ ನೇರವೆರಿಸಿ

ಅದರಂತೆ ಗ್ರಾ. ಪಂ. ಉಪಾಧ್ಯಕ್ಷ ಗುರು ವಾಲಿ ಅವರು ಮಹಾತ್ಮ ಗಾಂದೀಜಿ ಹಾಗೂ ಡಾ.ಬಿ,ಆರ್, ಅಂಬೇಡ್ಕರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಧ್ವಜಾರೋಹಣ ನೇರವೆರಿಸಿದರು.

ನಂತರ ಶಾಲಾ ಮಕ್ಕಳು ಸ್ವಾತಂತ್ರ್ಯ ದಿನಾಚರಣೆ ಮತ್ತು ಅದರ ಹೊರಾಟಗಾರರ ಬಗ್ಗೆ ಪಾಲಕರ ಹುಬ್ಬೇರುವಂತೆ ಭಾಷಣ ಮಾಡಿದರು, ಅದರ ಜೊತೆಯಲ್ಲಿ ವಿದ್ಯಾರ್ಥಿಗಳು ದೇಶ ಭಕ್ತಿಯ ಹಾಡುಗಳಿಗೆ ನೃತ್ಯ ಮಾಡಿ ಮನರಂಜಿಸುವದರ ಜೊತೆಯಲ್ಲಿ ದೇಶ ಭಕ್ತಿಯನ್ನು ತೊರಿಸಿದರು.

ಮಳಿಮಲ್ಲೇಶ್ವರ ಪಿಕೆಪಿಎಸ್ ಅಧ್ಯಕ್ಷ ಮಹಾಂತೇಶ ಗೋಡಿ ಮಾತನಾಡಿದ ಅವರು ಇಂದು ನಮ್ಮ ದೇಶವು ಸ್ವಾತಂತ್ರ್ಯದ 79 ವರ್ಷಗಳನ್ನು ಪೂರೈಸುತ್ತಿರುವ ಪವಿತ್ರ ಕ್ಷಣ. 1947ರ ಆಗಸ್ಟ್ 15ರಂದು ಪ್ರಾರಂಭವಾದ ಸ್ವಾತಂತ್ರ್ಯದ ದೀಪ, ಕೋಟ್ಯಂತರ ಜನರ ತ್ಯಾಗ, ತಪಸ್ಸು, ಹೋರಾಟ ಮತ್ತು ಬಲಿದಾನದ ಫಲ.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮಣಿದ ವೀರರು, ವೀರ ವನಿತೆಯರು, ಸೈನಿಕರು ಇನ್ನಿತರ ಮಹಾನ್ ನಾಯಕರು ಎಂದೆಂದಿಗೂ ನಮಗೆ ಪ್ರೇರಣೆ. ಅವರ ನಿಷ್ಠ, ದೇಶಭಕ್ತಿ ಮತ್ತು ದೇಶಪ್ರೇಮ, ತ್ಯಾಗ ಮತ್ತು ಬಲಿದಾನ ನಮಗೆ ಸ್ಫೂರ್ತಿದಾಯಕ.

ನಮ್ಮ ದೇಶದ ಏಕತೆ, ಅಖಂಡತೆ, ಪ್ರಗತಿ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವುದರ ಜೊತೆಗೆ ನವಭಾರತ ನಿರ್ಮಾಣದ ಪ್ರತಿಜ್ಞೆ ಮಾಡೋಣ. ರಾಷ್ಟ್ರವನ್ನು ಸಮೃದ್ಧಗೊಳಿಸುವುದರ ಕಡೆಗೆ ಹೆಜ್ಜೆ ಹಾಕೋಣ.

ವೇದಿಕೆಯ ಮೇಲೆ ಪೂಜ್ಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಪಿಡಿಓ ಎ. ಬಿ. ಬಂಗಾರಿ, ವಿರುಪಾಕ್ಷ ಪಾಟೀಲ, ಈರಣ್ಣಾ ಹೊಸಮನಿ, ಉಮೇಶ ಮಾಗುಂಡನವರ, ಗುರಪ್ಪ ಶೆಟ್ಟರ, ಗುರುಪಾದ ಗೋಡಿ, ಷಣ್ಮುಖ ಬಳಿಗಾರ, ಬಸವರಾಜ ಮುನ್ಯಾಳ, ಇಬ್ರಾಹಿಂಸಾಬ ಮುಲ್ಲಾ, ದುರ್ಗಪ್ಪ ಬಂಡಿವಡ್ಡರ, ಲಕ್ಷ್ಮಪ್ಪ ಹೆಗಡಿ, ಶ್ರೀಶೈಲ ಸವದತ್ತಿ, ಗುರುಪಾದ ಪಾಟೀಲ, ಈರಣ್ಣಾ ವಾಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಿದ್ಯುತ್ ವ್ಯತ್ಯಯ

ಬೆಳಗಾವಿ, : ಕ.ವಿ.ಪ್ರ.ನಿ.ನಿ ವತಿಯಿಂದ 110 ಕೆ.ವ್ಹಿ. ಸುವರ್ಣ ಸೌಧ ಉಪಕೇಂದ್ರದಲ್ಲಿ ಎರಡನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಸದರಿ ಉಪಕೇಂದ್ರದಿಂದ ಸರಬರಾಜು ಆಗುವ ಕೊಂಡಸಕೊಪ್ಪ, ಹಲಗಾ, ಬಸ್ತವಾಡ, ಶಗನಮಟ್ಟಿ, ಮಾಸ್ತಮರಡಿ, ಬಸರಿಕಟ್ಟಿ, ಶಿಂಧೋಳ್ಳಿ, ಮುತಗಾ, ಶ್ರೀರಾಮ ಕಾಲನಿ, ಸಾರಿಗೆ ನಗರ, ಮಹಾಲಕ್ಷ್ಮೀ ಪುರಂ, ಸಾಯಿ ನಗರ, ಭರತೇಶ ಕಾಲೇಜ, ಶಿಂಧೋಳ್ಳಿ ಕ್ರಾಸ್, ನಿಲಜಿ ಕ್ರಾಸ್, ಕಮಕಾರಟ್ಟಿ, ಬಡೆಕೊಳ್ಳಮಠ, ಕೋಳಿಕೊಪ್ಪ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್‌ಗಳ ಏರಿಯಾಗಳಿಗೆ ದಿನಾಂಕ: 17.08.2025 ರಂದು ಬೆಳಿಗ್ಗೆ 09.00 ಘಂಟೆಯಿಂದ ಸಂಜೆ 04.00 ಘಂಟೆಯ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕ.ವಿ.ಪ್ರ.ನಿ.ನಿ ವತಿಯಿಂದ 110 ಕೆ.ವ್ಹಿ. ಹುದಲಿ ಉಪಕೇಂದ್ರದಲ್ಲಿ ಎರಡನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಸದರಿ ಉಪಕೇಂದ್ರದಿಂದ ಸರಬರಾಜು ಆಗುವ ಹುದಲಿ, ನಂದಿ ಕುಡಿಯುವ ನೀರಿನ ಘಟಕ, ಕುಮರಿ, ರಂಗದೋಳಿ, ತುಮ್ಮರಗುದ್ದಿ, ಸೋಮನಟ್ಟಿ, ಕಬಲಾಪೂರ, ಚಂದೂರ, ಖನಗಾಂವ ಕೆ.ಎಚ್, ಖನಗಾಂವ ಬಿ.ಕೆ, ಅಷ್ಟೆ, ಮುಚ್ಚಂಡಿ, ಕಲಕಾಂಬ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್‌ಗಳ ಏರಿಯಾಗಳಿಗೆ ದಿನಾಂಕ: 17.08.2025 ರಂದು ಬೆಳಿಗ್ಗೆ 09.00 ಘಂಟೆಯಿಂದ ಸಂಜೆ 04.00 ಘಂಟೆಯ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕ.ವಿ.ಪ್ರ.ನಿ.ನಿ ವತಿಯಿಂದ 110 ಕೆ.ವ್ಹಿ. ನೆಹರು ನಗರ ಉಪಕೇಂದ್ರದಲ್ಲಿ ಎರಡನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಸದರಿ ಉಪಕೇಂದ್ರದಿಂದ ಸರಬರಾಜು ಆಗುವ ಹಿಂಡಲಗಾ, ಕಂಗ್ರಾಳಿ ಕೆ.ಎಚ್, ಅಲತಗಾ, ಅಂಬೇವಾಡಿ ಸುತ್ತಮುತ್ತಲಿನ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್‌ಗಳ ಏರಿಯಾಗಳಿಗೆ ದಿನಾಂಕ: 17–08–2025 ರಂದು ಬೆಳಿಗ್ಗೆ 9 ಘಂಟೆಯಿಂದ ಸಂಜೆ 4 ಘಂಟೆಯ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯಾ ಮತ್ತು ಪಾಲನೆ, ನಗರ ವಿಭಾಗ ಕಾರ್ಯನಿರ್ವಾಹಕ ಅಭಿಯಂತರರು(ವಿ), ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

***

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಸತಿ ಪ್ರೌಢಶಾಲೆಯಲ್ಲಿ 79ನೇಯ ಸ್ವಾತಂತ್ರ್ಯ ದಿನಾಚರಣೆ



ಬೆಳಗಾವಿ : ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಸತಿ ಪ್ರೌಢಶಾಲೆಯಲ್ಲಿ 79ನೇಯ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ-ಯಾಗಿ ಬಿ ಪಿ ಲಮಾಣಿಯವರು ವಿಶ್ರಾಂತ ಮುಖ್ಯೋಪಾಧ್ಯಾಯರು ಧ್ವಜಾ ರೋಹಣ ನೆರವೇರಿಸಿ, ಸ್ವಾತಂತ್ರ್ಯದ ಪೂರ್ವ ಹಾಗೂ ಸ್ವಾತಂತ್ರದ ನಂತರ ಬದಲಾವಣೆಯಾದ ಭಾರತದ ಚಿತ್ರಣದ ಬಗ್ಗೆ ಮಾತನಾಡಿದರು.

ನಂತರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು ಹಾಗೂ ಛದ್ಮವೇಷದ ಪ್ರದರ್ಶಿಸಿದರು ಅದರಲ್ಲಿ ಕಿತ್ತೂರರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ವೇಷಧಾರಿಗಳಿಗೆ ಬಹುಮಾನ ವಿತ-ರಿಸಲಾಯಿತು .

ಈ ಕಾರ್ಯಕ್ರಮದ ಪ್ರಾರಂಭದಲ್ಲಿ ಸ್ವತಂತ್ರ ಯೋಧರಾದ ಶ್ರೀ ಗವಿಸಿದ್ದಪ್ಪ ಬೆಳವಡಿಯವರ ಮೂರ್ತಿಗೆ ಪೂಜೆಯನ್ನು ಸಲ್ಲಿಸುವ ಮುಖಾಂತರ ಎಲ್ಲಾ ಕಾರ್ಯಕ್ರಮಗಳು ಪ್ರಾರಂಭವಾದವು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ ಎಂ ಮಠ ಸಂಸ್ಥೆಯ ಚೇರ್ಮನರಾದ ಶ್ರೀ ಆರ್ ಪಿ ಪಮ್ಮಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಿ ಎಂ ಸುಣಗಾರ್ ಸರ್ ಹಾಗೂ ಭೋದಕ ಬೋಧ ಕೇತರ ಸಿಬ್ಬಂದಿ ವರ್ಗದವರು ಪ್ರೌಢಶಾಲೆಯ ಬೋಧಕ ಬೋಧಕೇತರ ಸಿಬ್ಬಂದಿದವರು ಶಾಲೆಯ ಮುದ್ದು ಮಕ್ಕಳು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

## ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ಬಲಿದಾನ ಮಾಡಿದ ಕ್ರಾಂತಿಕಾರಿ ಹೋರಾಟಗಾರನನ್ನು ಸ್ಮರಿಸಬೇಕೆಂದು

# ಭಾರತ ದೇಶದ ಯುವ ಜನತೆ ದೇಶಕ್ಕಾಗಿ ದೇಶದ ಭವಿಷ್ಯವಾಗಿ ಬದುಕಬೇಕು



ಮುದ್ದೇಬಿಹಾಳ ; ಭಾರತ ದೇಶದ ಯುವ ಜನತೆ ದೇಶಕ್ಕಾಗಿ ದೇಶದ ಭವಿಷ್ಯವಾಗಿ ಬದುಕಬೇಕು ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ಬಲಿದಾನ ಮಾಡಿದ ಕ್ರಾಂತಿಕಾರಿ ಹೋರಾಟಗಾರನನ್ನು ಸ್ಮರಿಸಬೇಕೆಂದು ಕೆಎಸ್ಡಿ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್ ನಾಡಗೌಡ ಅಪ್ಪಾಜೀ ಹೇಳಿದರು ಶುಕ್ರವಾರ ತಾಲೂಕ ಆಡಳಿತದಿಂದ ನಡೆದ 79 ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು ಶಾಲಾ ಶಿಕ್ಷಕರು ಮಕ್ಕಳಿಗೆ ಶಿಕ್ಷಣದೂಂದಿಗೆ ದೇಶದ ನಾಗರಿಕರಾಗಿ ಹೇಗೆ ಬದುಕಬೇಕೆಂದು ಕಲಿಸಬೇಕು ಎಂದ ಶಾಸಕರು ಡಿಜಿಟಲ್ ಮಾದ್ಯಮದಿಂದ ಸಮಾಜಕ್ಕೆ ಒಳಿತಾಗಬೇಕು ವಿನಃ ಸಮಾಜದ ಸ್ವಾಸ್ಥ್ಯ ಹಾಳಾಗಬಾರದು ಎಂದರು.

ಧ್ವಜಾರೋಹಣ ಮಾಡಿ ಮಾತನಾಡಿದ ತಹಶಿಲ್ದಾರ ಶ್ರೀಮತಿ ಕೀರ್ತಿ ಚಾಲಕ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನದ ಮಾಡಿದ ಯೋಧರಿಗೆ ಗೌರವಿಸಬೇಕೆಂದರು.

79 ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆಕರ್ಷಕ ಪಥಸಂಚಲನ ಹಾಗೂ ಶಾಲಾ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸಳೆದವು ; ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಥಮ ಕೆಬಿಎಂಪಿಎಸ್ ಶಾಲೆ ದ್ವಿತಿಯ ಎಂಜಿಎಂಕೆ ಶಾಲೆ ತೃತೀಯ ವಿದ್ಯಾಚೇತನ, ಪಥ ಸಂಚಲನದಲ್ಲಿ ಪ್ರಥಮ ಚಿನ್ಮಯ ಜೆಸಿ, ದ್ವಿತೀಯ ಅಂಜುಮನ್ ಪ್ರೌಢಶಾಲೆ ತೃತೀಯ ಅಭ್ಯುದಯ ಇಂಟರ್ನ್ಯಾಷನಲ್ ಸ್ಕೂಲ್ ನ ಮಕ್ಕಳು ಭಾಗವಹಿಸಿದ್ದರು.

ಕ್ಷೇತ್ರ ಸಮನ್ವಯಧಿಕಾರಿ ಯು ಬಿ ಧರಿಕಾರ ಮಾತನಾಡಿದರು ಕ್ಷೇತ್ರ ಶಿಕ್ಷಣಾಧಿಕಾರಿ ಬಿ ಎಸ್ ಸಾವಳಗಿ ಸ್ವಾಗತಿಸಿದರು ಶಿಕ್ಷಕ ಟಿ.ಡಿ ಲಮಾಣಿ,ಗುಂಡು ಚವ್ಹಾಣ, ನಿರೂಪಿಸಿ ವಂದಿಸಿದರು.

ತಾಪಂ ಇಒ ಎನ್ ಎಸ್ ಮಸಳಿ,ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ,ಎಂ.ಬಿ ನಾವದಗಿ, ಅಬ್ದುಲ್ ಗಫೂರ ಮಕಾನದಾರ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಅರವಿಂದ ಹುಗಾರ, ಪ್ರಭು ಕಡಿ, ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್ ಡಿ ಬಾವಿಕಟ್ಟಿ, ಡಾ ಎಸ್ ಬಿ ತಿವಾರಿ,ಶಿವಾನಂದ ಮೇಟಿ,ಖೂಬಾಸಿಂಗ್ ಜಾದವ್,ಸೇರಿದಂತೆ ವಿವಿಧ ಸರಕಾರಿ ಇಲಾಖೆಯ ಅಧಿಕಾರಿಗಳು,ಕಂದಾಯ ಇಲಾಖೆ ಸಿಬ್ಬಂದಿಗಳು, ಗಣ್ಯರು ಪುರಸಭೆ ಸದಸ್ಯರು ಹಾಜರಿದ್ದರು.

# ಭಾರತ ಆರ್ಥಿಕತೆಯ ನಂ.1 ದೇಶ ಆಗಲಿದೆ :ಈರಣ್ಣ ಕಡಾಡಿ

ಮೂಡಲಗಿ: ಶತಶತಮಾನಗಳಿಂದ ದಾಸ್ಯರ ಸಂಕೋಲೆಯನ್ನು ಕಿತ್ತೊಗೆದು ಬ್ರಿಟಿಷ-ರಿಂದ ಸ್ವಾತಂತ್ರ ಪಡದು 79 ವರ್ಷಗಳು ಕಳೆದಿವೆ. 2047ರ ಸ್ವಾತಂತ್ರೋತ್ಸವ ಅದು ಶತಮಾನದ ಸ್ವಾತಂತ್ರೋತ್ಸವ. ಸ್ವಾತಂತ್ರ ಶತಮಾನೋತ್ಸವದ ವೇಳೆಗೆ ಆತ್ಮನಿರ್ಭರ ಭಾರತ ಆಗುವುದರ ಜೊತೆಗೆ ಭಾರತದ ಆರ್ಥಿಕತೆ ಜಗತ್ತಿನ ನಂ. 1 ಹಂತ ಬರುವ ಗುರಿಯನ್ನು ಇಡೇರಿಸುವುದು ನಮ್ಮೆಲ್ಲರ ಸಂಕಲ್ಪವಾಗಲಿ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಕಲ್ಲೋಳಿ ಪಟ್ಟಣದ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ, ಶ್ರೀ ಮಹಾಲಕ್ಷ್ಮೀ ಹಾಲು ಉತ್ಪಾದಕರ ಸಹಕಾರಿ ಸಂಘ ಹಾಗೂ ಶ್ರೀ ಮಹಾಲಕ್ಷ್ಮೀ ಪಿಕೆಪಿಎಸ್ ಇವುಗಳ ಆಡಳಿತ ಕಚೇರಿ ಮೇಲೆ 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಾಜ್ಯಸಭೆ ಸಂಸದ ಈರಣ್ಣ ಕಡಾಡಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಭಾರತ ಹಳ್ಳಿಗಳ ದೇಶ, ರೈತ ಈ ದೇಶದ ಬೆನ್ನೆಲುಬು ಎಂದವರು ಗಾಂಧಿ ಆದರೆ ರೈತರ ಬದುಕನ್ನು ಚೈತನ್ಯ ಪೂರ್ಣಗೊಳಿಸುವ ನಿಟ್ಟಿನಲ್ಲಿ ಈವರೆಗಿನ ಪ್ರಯತ್ನಗಳು ನಿರೀಕ್ಷಿತ ಫಲ ನೀಡಿಲ್ಲ. ಜಗತ್ತಿನ ಅನೇಕ ದೇಶಗಳು ಎದುರಿಸುತ್ತಿರುವ ಆಹಾರ ಕೊರತೆಯ ಬಹುದೊಡ್ಡ ಭಾಗವನ್ನು ನೀಗಿಸಿ, ಹಸಿವು ಮುಕ್ತ ಮಾಡುವ ಶಕ್ತಿ ನಮ್ಮ ಕೃಷಿ ಕ್ಷೇತ್ರಕ್ಕಿದೆ. ಕೃಷಿ ಕ್ಷೇತ್ರವನ್ನು ಪ್ರಧಾನಿ ನರೇಂದ್ರ ಮೋದಿ ಯವರು ಅಧಿಕಾರಕ್ಕೆ ಬಂದ ನಂತರ ಕೃಷಿ ಕ್ಷೇತ್ರವನ್ನು ಪರಿವರ್ತಿಸುವ ಗುರಿಯನ್ನು ಹೊಂದಿರುವ ಕೇಂದ್ರ ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ರೈತರ ಉತ್ಪನ್ನಗಳಿಗೆ ನ್ಯಾಯಯುತ ಬೆಲೆಗಳನ್ನು ಖಾತ್ರಿಪಡಿಸುವುದು, ಕೃಷಿ ಆರ್ಥಿಕತೆಯನ್ನು ಬಲಪಡಿಸುವುದು, ಹಾನಿಕಾರಕ ರಾಸಾಯನಿಕಗಳಿಂದ ಮಣ್ಣಿನ ಆರೋಗ್ಯವನ್ನು ರಕ್ಷಿಸುವುದು, ಕೃಷಿ ತಂತ್ರಗಳನ್ನು ಆಧುನೀಕರಿಸುವುದು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕೃಷಿ ಕ್ಷೇತ್ರಕ್ಕೆ ಅಳವಡಿಸಿಕೊಳ್ಳಲಾಗಿದೆ. ಗ್ರಾಮೀಣ ರೈತರ ಬದುಕು ಹಸನಾದರೆ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ. ರೈತನ




ಬೆವರಿಗೆ ಬಂಗಾರದ ಬೆಲೆ ದಕ್ಕಿದರೆ ಮಾತ್ರ ಸುವರ್ಣ ಭಾರತವಾಗುತ್ತದೆ. ಆದ್ದರಿಂದ 'ರೈತ ಭಾರತದ ನಿರ್ಮಾಣ' ನಮ್ಮ ವಿಶೇಷ ಸಂಕಲ್ಪವಾಗಬೇಕಿದೆ ಎಂದು ಕರೆ ನೀಡಿದರು. ಬಿಡಿಸಿಸಿ ಬ್ಯಾಂಕ ನಿರ್ದೇಶಕ ಸತೀಶ ಕಡಾಡಿ, ಸಹಕಾರಿಯ ಉಪಾಧ್ಯಕ್ಷ ಶ್ರೀಶೈಲ ತುಪ್ಪದ, ಪರಪ್ಪ ಮಳವಾಡ, ಸೋಮನಿಂಗ ಹಡಗಿನಾಳ, ಸಿದ್ದಪ್ಪ ಹೆಬ್ಬಾಳ, ಶಿವಪ್ಪ ಗೋಸಬಾಳ, ಅಡಿವೆಪ್ಪ ಕುರಬೇಟ, ಪ್ರಭು ಕಡಾಡಿ, ಹಣಮಂತ ಸಂಗಟಿ, ಕಾಡೇಶ ಗೋರೋಶಿ, ಗುರುನಾಥ ಮದಭಾಂವಿ, ತುಕಾರಾಮ ಪಾಲ್ಕಿ, ದಸ್ತಗೀರ ಕಮತನೂರ, ಗೋಪಾಲ ಜಾಲರ, ಉದ್ದಪ್ಪ ಪೂಜೇರಿ, ಅಶೋಕ ತಳವಾರ, ಬಸವರಾಜ ದಾಸನಾಳ, ಈರಣ್ಣ ಮುನ್ನೋಳಿಮಠ, ಪ್ರಧಾನ ವ್ಯವಸ್ಥಾಪಕ ಪ್ರಭಾರ ಪರಪ್ಪ ಗಿರೆಣ್ಣವರ, ಶಾಖಾ ವ್ಯವಸ್ಥಾಪಕರಾದ ಹಣಮಂತ ಕಲಕುಟ್ರಿ, ಶಂಕರ ಕೌಜಲಗಿ, ಶಿವಾನಂದ ಬಡಿಗೇರ, ದೊಡ್ಡಪ್ಪ ಉಜ್ಜನಕೊಪ್ಪ, ಶಾಖಾ ವ್ಯವಸ್ಥಾಪಕರಾದ ಪ್ರಶಾಂತ ಪಟ್ಟಣಶೆಟ್ಟಿ, ವಿಠ್ಠಲ ಜಟ್ಟೆನ್ನವರ ಸೇರಿದಂತೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ನೇಸರಗಿ ಅರ್ಬನ ಬ್ಯಾಂಕನಲ್ಲಿ ಧ್ವಜಾರೋಹಣ




ನೇಸರಗಿ: ಇಲ್ಲಿನ ಪ್ರತಿಷ್ಠಿತ ದಿ. ನೇಸರಗಿ ಅರ್ಬನ್ ಬ್ಯಾಂಕನಲ್ಲಿ 79ನೇ ಸ್ವಾತಂತ್ರ್ಯೋತ್ಸವದ ನಿಮಿತ್ಯವಾಗಿ ಧ್ವಜಾರೋಹಣನ ಕಾರ್ಯಕ್ರಮ ನೆರವೇರಿಸಿದರು.ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಸೋಮಪ್ಪ ಸೋಮಣ್ಣವರ, ನಿರ್ದೇಶಕರಾದ ಶಿವನಗೌಡ ಪಾಟೀಲ, ಮಹಾಂತೇಶ ಕೂಲಿನವರ, ಜಿಲ್ಲಾ ಸಹಕಾರಿ ಯೂನಿಯನ ಸದಸ್ಯರಾದ ಶಂಕರಗೌಡ ದೊಡಗೌಡರ ಹಾಗೂ ಬ್ಯಾಂಕಿನ ಸಿಬ್ಬಂದಿ ಹಾಜರಿದ್ದರು.

****

# ನಾಳಿನ ನೆರಳಿಗೆ ಒಂದು ಗಿಡ ನೆಡಿ: ಶ್ರೀ ಬಸವ ಸ್ವಾಮಿಗಳು

## 79ನೇ ಸ್ವಾತಂತ್ರ್ಯೋತ್ಸವ, ಗಣ್ಯರಿಂದ ಭಾಷಣ, ವಿದ್ಯಾರ್ಥಿಗಳಿಗೆ 700 ಸಸಿ ವಿತರಣೆ, ಸ್ವಾಮೀಜಿಗಳ ಆಶೀರ್ವಚನ



ಮುಗಳಖೋಡ: ಪಟ್ಟಣದ ಸುತ್ತಮುತ್ತಲಿನ ಬಡ ವಿದ್ಯಾರ್ಥಿಗಳಿಗೆ ಕೇವಲ ಶಿಕ್ಷಣ ಅಷ್ಟೇ ನೀಡದೆ, ಹಣ್ಣಿನ ಸಸಿಗಳನ್ನು ವಿತರಿಸಿ ಮುಂದಿನ ಪೀಳಿಗೆಗೆ ಪ್ರೇರಣೆಯಾಗುವಂತೆ ಪರಿಸರ ಜಾಗೃತಿ ಮೂಡಿಸುವ ಹೆಮ್ಮೆಯ ಶಿಕ್ಷಣ ಸಂಸ್ಥೆ ಇದಾಗಿದೆ ಎಂದು ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಕುರಿತು ಅಥಣಿ ಗಚ್ಚಿನಮಠದ ಶ್ರೀ ಬಸವ ಮಹಾಸ್ವಾಮೀಜಿ ಮಾತನಾಡಿದರು.

ಅವರು ಮುಗಳಖೋಡ ಪಟ್ಟಣದ ಶ್ರೀ ಚವಿವ ಸಂಘದ ಅಡಿಯಲ್ಲಿ 79ನೇ ಸ್ವಾತಂತ್ರ್ಯೋತ್ಸವದ ನಿಮಿತ್ಯ "ವೃಕ್ಷವೀರ" ಅಭಿಯಾನದಡಿ ಸಸಿ ವಿತರಣಾ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಇವತ್ತು ನೀವು ಹಚ್ಚುವ ಈ ಸಸಿಗಳು ನಾಳೆ ಹೆಮ್ಮರವಾಗಿ ಬೆಳೆದು ಮುಂದಿನ ಪೀಳಿಗೆಗೆ ನೆರಳಾಗಿ ಹಣ್ಣು ನೀಡುತ್ತವೆ. ಓದಿನ ಜೊತೆ ಪರಿಸರ ರಕ್ಷಣೆ ಹಾಗೂ ಬೆಳವಣಿಗೆ ತಮ್ಮೆಲ್ಲರ ಕರ್ತವ್ಯವಾಗಿದೆ. ಬರುವ ದಿನಗಳಲ್ಲಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಒಂದು ಗಿಡವನ್ನು ನಾವು ನೆಡಲೇಬೇಕು. ಆವಾಗ ನಮ್ಮೆಲ್ಲರ ಜೀವನ ಸಾರ್ಥಕವಾಗುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಾಗಿ ಆಸಕ್ತಿ ಹೊಂದಿರುವ ಸಿ.ಬಿ.ಕುಲಿಗೋಡ ಅವರು ಇಲ್ಲಿಯ ವಿದ್ಯಾರ್ಥಿಗಳಿಗೆ ಮುಂಬರುವ ದಿನಗಳಲ್ಲಿ ವೈದ್ಯಕೀಯ ಶಿಕ್ಷಣ ಒದಗಿಸುವಂತಹ ಬೆಳವಣಿಗೆ ಈ ಶಿಕ್ಷಣ ಸಂಸ್ಥೆ ಹೊಂದಲಿ ಎಂದು ಆಶೀರ್ವಚನ ನೀಡಿದರು.

ವೃಕ್ಷವೀರ ಅಭಿಯಾನದಡಿ ಮಹಾತ್ಮ ಗಾಂಧೀಜಿ, ಬಿ.ಆರ್. ಅಂಬೇಡ್ಕರ್, ಬಸವೇಶ್ವರರು, ವಿವೇಕಾನಂದರು, ಇಂಚಗೇರಿ ಮಹಾದೇವರು, ಮುಗಳಖೋಡ ಯಲ್ಲಾಲಿಂಗ, ಪಂಡಿತ್ ಪುಟ್ಟರಾಜ ಗವಾಯಿ, ಶಿವಕುಮಾರ ಸ್ವಾಮಿಗಳು, ಇಬ್ರಾಹಿಂ ಸುತಾರ್, ಸಿದ್ದೇಶ್ವರ ಶ್ರೀಗಳು, ಸಾಲುಮರದ ತಿಮ್ಮಕ್ಕ, ರತನ್ ಟಾಟಾ ಸೇರಿದಂತೆ ಸಮಾಜ ಸುಧಾರಕರು, ಚಿಂತಕರು, ಸಾಧಕರು, ಕವಿಗಳು, ಸ್ವಾಮೀ-ಜಿಗಳು ಹಾಗೂ ಹೆಮ್ಮೆಯ ವೀರರ ಹೆಸರಿನ ಮೇಲೆ ಸುಮಾರು 700 ಸಸಿಗಳನ್ನು ವಿತರಿಸಿ ಅಂತಹ ಮಹಾನುಭಾವರ ಹೆಸರಿನ ಮೇಲೆ ಸಸಿಗಳನ್ನು ಬೆಳೆಸಲು ವಿದ್ಯಾರ್ಥಿಗಳಿಗೆ ಸೂಚಿಸಲಾಯಿತು.

ಹಿರಿಯರಾದ ಸುನಂದಾ ಕರೆಪ್ಪ ಬೀಳಗಿ ಧ್ವಜಾರೋಹಣ ನೆರವೇರಿಸಿದರು.

ಸಂಸ್ಥೆಯ ಅಧ್ಯಕ್ಷ ಶ್ರೀ ಸಂಜಯ ಕುಲಿಗೋಡ ಮಾತನಾಡಿ ಈ ದಿನ ಮಾತ್ರ ನಾವು ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸದೇ ಪ್ರತಿದಿನ ಒಮ್ಮೆಯಾದರೂ ಅಂತಹ ಮಹಾನುಭಾವರ ಕುರಿತ ಪುಸ್ತಕಗಳನ್ನು ಓದಿ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು, ಅಂತಹ ಮಹಾತ್ಮರ ಹೆಸರಿನ ಮೇಲೆ ಒಳ್ಳೆಯ ಕಾರ್ಯಗಳನ್ನು ಹಮ್ಮಿಕೊಂಡು ನಾವು ಕೂಡ ಸ್ವತಂತ್ರರಾಗಿ ಸಮಾಜ ಬೆಳವಣಿಗೆಗಾಗಿ ಶ್ರಮ ಪಡೋಣ. ಎಲ್ಲ ವಿದ್ಯಾರ್ಥಿಗಳು ಕೆಟ್ಟ ವಿಚಾರಗಳಿಗೆ ಗಮನಕೊಡದೆ ಕೇವಲ ಒಳಿತಿಗಾಗಿ ಮಾತ್ರ ಬದುಕುವ ಕಾರ್ಯ ನಮ್ಮದಾಗಬೇಕು ಎಂದರು. ನಂತರ ಆಗಮಿಸಿದ ಗಣ್ಯರು ಮಾತನಾಡಿದರು.

ಕಾರ್ಯಕ್ರಮವನ್ನು ಐಕ್ಯೂಎಸಿ ಘಟಕದ ಸಂಯೋಜಕ ಪ್ರದೀಪ ನಾಯಿಕ ನಿರೂಪಿಸಿ, ಉಪ ಪ್ರಾಚಾರ್ಯ ಆರ್.ಎಸ್.ಶೇಗುಣಸಿ ಸ್ವಾಗತಿಸಿ, ಸಾಂಸ್ಕೃತಿಕ ಘಟಕದ ಮುಖ್ಯಸ್ಥ ಸಂಗಮೇಶ ಹಿರೇಮಠ ವಂದಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ರಾಜ್ಯ ಅಸಂಘಟಿತ ಕಾರ್ಮಿಕ ವರ್ಗಗಳ ಉಪಾಧ್ಯಕ್ಷ ಡಾ. ಸಿ. ಬಿ. ಕುಲಿಗೋಡ, ಪಟ್ಟಣದ ಗಣ್ಯರು, ಪ್ರಮುಖರು, ಗುರು ಹಿರಿಯರು, ಚವಿವ ಸಂಘದ ಸರ್ವ ಸದಸ್ಯರು, ಎಲ್ಲ ಅಂಗ ಸಂಸ್ಥೆಗಳ ಮುಖ್ಯಸ್ಥರು, ಸಿಬ್ಬಂದಿ ವರ್ಗ, ವಿದ್ಯಾರ್ಥಿ ವೃಂದ, ವಾಹನ ಚಾಲಕರು ಉಪಸ್ಥಿತ-ರಿದ್ದರು.

**ನೇಸರಗಿ ಬಸ್ ನಿಲ್ದಾಣದಲ್ಲಿ 79 ನೇ ಸ್ವಾತಂತ್ರೋತ್ಸವನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು. ಸ್ವಾತಂತ್ರ್ಯ ಆಚರಣೆಯಲ್ಲಿ ಪಿ ಎಸ್ ಐ ಬಾಳಪ್ಪ ಸಂಗಮದ (ರಿತಿ ) ನೇಸರಗಿ ಸಾರಿಗೆ ನಿಯಂತ್ರಕರಾದ ಪ್ರಕಾಶ ಎಸ್ ಹಿರೇಮಠ, ಐ ಎಮ್ ಮಿರ್ಜನವರ, ಎ ಎಸ್ ಐ ಇಮಾಮ್ ಪಕ್ಕಾಲಿ, ಕಾಂಗ್ರೆಸ್ ಮುಖಂಡ ಈರಪ್ಪ ಜಿರಲಿ, ತಿಪ್ಪಣ್ಣ ಹಣಬರಹಟ್ಟಿ, ರಾಜು ತಲ್ಲೂರ ಸೇರಿದಂತೆ ಅನೇಕರು ಭಾಗವಹಿಸಿದ್ದರು.**



# ಸ್ವಾತಂತ್ರ್ಯ ಯೋಧರ ತ್ಯಾಗದ ಸ್ಮರಣೆ ಬಹುಮುಖ್ಯ- ಸುರೇಶಗೌಡ ಬಿರಾದಾರ



ವಿಜಯಪುರ: ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲ ವೀರರನ್ನು ಸ್ಮರಿಸಬೇಕು ಮತ್ತು ಅವರ ತ್ಯಾಗವನ್ನು ಗೌರವಿಸಬೇಕು. ನಮ್ಮ ದೇಶವನ್ನು ಪ್ರೀತಿ ಮತ್ತು ಗೌರವದಿಂದ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಎಂದು ಮುಖ್ಯ ಶಿಕ್ಷಕ ಸುರೇಶಗೌಡ ಬಿರಾದಾರ ಹೇಳಿದರು.

ಶುಕ್ರವಾರದಂದು ತಾಲೂಕಿನ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಜವಾಬ್ದಾರಿಯುತ ನಾಗರೀಕರಾಗಿ, ನಮ್ಮ ಪ್ರೀತಿಯ ರಾಷ್ಟ್ರವನ್ನು ಮುನ್ನಡೆಸಲು ಪ್ರತಿಜ್ಞೆ ಮಾಡೋಣ. ನಮ್ಮ ಸ್ವಾತಂತ್ರ್ಯ ಯೋಧರು ಮಾಡಿದ ತ್ಯಾಗಗಳನ್ನು ಸ್ಮರಿಸುವಲ್ಲಿ ಪ್ರಜಾಪ್ರಭುತ್ವ, ಸಮಾನತೆ ಮತ್ತು ನ್ಯಾಯದ ಮೌಲ್ಯಗಳನ್ನು ರಕ್ಷಿಸೋಣ ಎಂದು ಹೇಳಿದರು.

ಮಕ್ಕಳು ವಿವಿಧ ರಾಷ್ಟ್ರ ನಾಯಕರ ವೇಷಧರಿಸಿದ್ದು, ವಿಶೇಷವಾಗಿತ್ತು. ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಊರಿನ ಗಣ್ಯರು, ಪಾಲಕರು, ಶಾಲಾ ಶಿಕ್ಷಕರು, ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕರ ಮಾದರಿ:ಈರಣ್ಣ ಕಡಾಡಿ



ಕಲ್ಲೋಳಿ :ಪಟ್ಟಣದಲ್ಲಿ ಸ್ವಾತಂತ್ರ್ಯ ಹೋರಾಟಗಾರ, ಕಿತ್ತೂರು ರಾಣಿ ಚೆನ್ನಮ್ಮಳ ಬಲಗೈ ಬಂಟ, ಕನ್ನಡ ನಾಡಿನ ಹೆಮ್ಮೆಯ ಪುತ್ರ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಜಯಂತಿಯ ಅಂಗವಾಗಿ ಅವರ ಪ್ರತಿಮೆ ಮಾಲಾರ್ಪಣೆ ಮಾಡಿ, ಗೌರವ ನಮನವನ್ನು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಸತೀಶ ಕಡಾಡಿ, ಮಾರುತಿ ಮರಡಿ, ತುಕಾರಾಮ ಪಾಲ್ಕಿ, ರೇವಪ್ಪ ಮಸಗುಪ್ಪಿ, ಬಸವರಾಜ ವ್ಯಾಪಾರಿ ಸೇರಿದಂತೆ ಹಾಲುಮತ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

# ನೇಸರಗಿ ಪಿಕೆಪಿಎಸ ನಲ್ಲಿ ಸ್ವಾತಂತ್ರ ದಿನ ಆಚರಣೆ



ನೇಸರಗಿ: ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇಲ್ಲಿ 79 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಆರ್ ಎಮ್ ಯತ್ತಿನಮನಿ,ಆಡಳಿತ ಮಂಡಳಿ ಸದಸ್ಯರಾದ ವೀರಪಣ್ಣ ಚೋಭಾರಿ, ಮಲ್ಲೇಶಪ್ಪ ಮಾಳಣ್ಣವರ, ಗಂಗಪ್ಪ ಕಾಡಣ್ಣವರ, ಯಲ್ಲಪ್ಪ ತಳವಾರ,ಮಹಾಂತೇಶ ಸತ್ತಿಗೇರಿ, ನಿವೃತ್ತ ಸಹಕಾರಿ ನಿಭಂದಕ ಎಮ್ ಟಿ ಪಾಟೀಲ,ಅಡಿವಪ್ಪ ಮಾಳಣ್ಣವರ, ಶಂಕರ ತಿಗಡಿ, ಡಿಸಿಸಿ ಬ್ಯಾಂಕ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ಮಹಾದೇವಿ ಜೋಳದ, ಮಲ್ಲಿಕಾರ್ಜುನ ಕಲ್ಲೋಳಿ, ಬಸವರಾಜ ಹಿರೇಮಠ, ಮಕಬುಲ ಬೇಪಾರಿ, ಕಾರ್ಯನಿರ್ವಾಹಕ ವಿಶ್ವನಾಥ ಕೂಲಿನವರ,ಶ್ರೀಕಾಂತ ತರಗಾರ ಹಾಗೂ ಆಡಳಿತ ಮಂಡಳಿ ಸದಸ್ಯರು, ಮಾಜಿ ಸೈನಿಕರ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ವಿವಿಧ ಅಂಗಡಿಗಳಿಗೆ ಗೊಬ್ಬರ ವಿತರಣೆ



ಇಂಡಿ : ಪಟ್ಟಣ ಸೇರಿದಂತೆ ವಿವಿಧ ಗ್ರಾಮಗಳ ಗೊಬ್ಬರ ಮಾರಾಟ ಕೇಂದ್ರಗಳಿಗೆ 250 ಕ್ವಿಂಟಾಲ್ ಗೊಬ್ಬರ ನೀಡಲಾಗಿದ್ದು ಅವುಗಳನ್ನು ಅಂಗಡಿಕಾರರು ರೈತರಿಗೆ ವಿತರಿದ್ದಾರೆ ಎಂದು ಕೃಷಿ ಉಪ ನಿರ್ದೇಶಕ ಚಂದ್ರಕಾಂತ ಪವಾರ ಹೇಳಿದರು.

ಪಟ್ಟಣದ ವಿವಿಧ ಅಂಗಡಿಗಳಿಗೆ ಗೊಬ್ಬರ ವಿತರಿಸುವ ವೇಳೆ ಭೇಟಿ ನೀಡಿ ರೈತರನ್ನು ಉದ್ದೇಶಿಸಿ ಮಾತನಾಡಿದರು.

ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರರವರು ಮಾತನಾಡಿ ಎಂ.ಸಿ.ಧನಶೆಟ್ಟಿ ಅಂಗಡಿಯಲ್ಲಿ 20 ಕ್ವಿಂಟಲ್, ಇಂಡಿಯ ರಾಜೇಶ್ವರಿ ಅಗ್ರೋ, 20, ಬಿರಾದಾರ ಅಗ್ರೋ 20, ಪಾಟೀಲ ಅಗ್ರೋ 20, ಎ.ಜೆ. ಧನಶೆಟ್ಟಿ 20,ಶ್ರೀ ರೇವಣಸಿದ್ದೇಶ್ವರ ಅಗ್ರೋ ತಾಂಬಾ 20ಪಾಟೀಲ ಅಗ್ರೋ ಅಥರ್ಗಾ 20,ಆರ್.ಡಿ.ಉಕ್ಕಲಿ ಅಗ್ರೋ ಝಳಕಿ 20,ವೀರಭದ್ರೇಶ್ವರ ಅಗ್ರೋ ಸಾತಲಗಾಂವ 20, ಶಿವಯೋಗೀಶ್ವರ ಅಗ್ರೋ ಸಾಲೋಟಗಿ, ಪಾಟೀಲ ಫರ್ಟಿಲೈಜರ್ಸ ತಾಂಬಾ 40 ಕ್ವಿಂಟಾಲ ಗೊಬ್ಬರ ವಿತರಿಸಿದ್ದಾರೆ ಎಂದರು.

ಕೃಷಿ ಅಧಿಕಾರಿ ಮಹಾಂತೇಶ ಶೆಟ್ಟೆನ್ನವರ, ರವಿ ಹುಣಚ್ಯಾಳ,ರಾಜೇಶ ಬಿರಾದಾರ, ಸಂಜೀವ, ಶಾಂತು ಧನಶೆಟ್ಟಿ, ಚೇತನ ಧನಶೆಟ್ಟಿ ಮತ್ತಿತರಿದ್ದರು.

# ಇಂದು ಕಾರಟಗಿ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

ಕೊಪ್ಪಳ : 2025-26ನೇ ಸಾಲಿನ ಕಾರಟಗಿ ತಾಲೂಕಿನ ತಾಲೂಕು ಮಟ್ಟದ ದಸರಾ ಕ್ರೀಡಾಕೂಟವನ್ನು ಪುರುಷ ಮತ್ತು ಮಹಿಳೆಯರಿಗೆ ಆಗಸ್ಟ್ 16ರಂದು ಬೆಳಿಗ್ಗೆ 9 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಯೊಂದಿಗೆ ಕ್ರೀಡಾಕೂಟವನ್ನು ಕಾರಟಗಿ ನಗರದ ಸಿದ್ದೇಶ್ವರ ರಂಗಮಂದಿರ ಎದುರುಗಡೆಯ ಕರ್ನಾಟಕ ಪಬ್ಲಿಕ ಶಾಲೆಯಲ್ಲಿ (ಕೆ.ಪಿ.ಎಸ್) ಏರ್ಪಡಿಸಲಾಗಿದೆ. ಈ ಕ್ರೀಡಾ ಸ್ಪರ್ಧೆಗಳು ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿರುತ್ತವೆ. ಈ ಕ್ರೀಡಾಕೂಟದಲ್ಲಿ ಸಮವಸ್ತ್ರದಾರಿ ಸೇವೆಗೆ ಸೇರಿದ, ರಕ್ಷಣಾಪಡೆ,ಅರೆ ರಕ್ಷಣಾ ಪಡೆ ಕ್ರೀಡಾಪಟುಗಳು ಭಾಗವಹಿಸಲು ಅರ್ಹರಲ್ಲ. ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಯಾವ ವಯಸ್ಸಿನ ನಿರ್ಬಂಧವಿಲ್ಲ. ತಾಲೂಕು ಮಟ್ಟದಲ್ಲಿ ನಡೆಯುವ ಕ್ರೀಡೆಗಳಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳು ಹಾಗೂ ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕ್ರೀಡಾಪಟುಗಳಿಗೆ ಜಿಲ್ಲಾ ಮಟ್ಟದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ಈಶಪ್ಪ ಗಾಜಿ (ದೈ.ಶಿ) ಮೊ.ಸಂ: 9535831941, ವಿಠ್ಠಲ್ ಜೀರಗಾಳಿ (ದೈ.ಶಿ) ಮೊ.ಸಂ: 9900299480, ಹಂಪನಗೌಡ (ದೈ.ಶಿ) ಮೊ.ಸಂ: 9481465709, ಯಮನಪ್ಪ (ದೈ.ಶಿ) ಮೊ.ಸಂ: 9591249132, ರವಿನಾಯಕ್ (ದೈ.ಶಿ) ಮೊ.ಸಂ: 9980375462, ಬಸವರಾಜ (ದೈ.ಶಿ) ಮೊ.ಸಂ: 720448286, ಶಿವಕುಮಾರ (ದೈ.ಶಿ) ಮೊ.ಸಂ: 7795574413, ಯಮನೂರಸಾಬ್(ದೈ.ಶಿ) ಮೊ.ಸಂ: 9902792814 ಗೆ ಅಥವಾ ಕೊಪ್ಪಳ ಜಿಲ್ಲಾ ಮತ್ತು ಕಾರಟಗಿ ತಾಲ್ಲೂಕು ಕ್ರೀಡಾ ಇಲಾಖೆಯ ಕಛೇರಿಗೆ ಸಂಪರ್ಕಿಸುವಂತೆ ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸವಣ್ಣನ ಕ್ರಾಂತಿಕಾರಿ ವಿಚಾರಗಳ ತಲೆದಂಡ ನಾಟಕ ಬಂಧಿಗಳ ಮನ ಪರಿವರ್ತನೆಗೆ ಉತ್ತಮ ಪ್ರಯೋಗ

# ರಂಗಾಯಣದ ಹೊಸ ಪ್ರಯೋಗ ಪರಿಣಾಮಕಾರಿ ಆಗಿದೆ -ಜಿಲ್ಲಾಧಿಕಾರಿ ದಿವ್ಯ ಪ್ರಭು

ಧಾರವಾಡ : ಮನಸ್ಸು ಮತ್ತು ದೇಹದ ಚಲನೆಯಲ್ಲಿ ಏಕತೆ, ಸಾಮ್ಯತೆ ಇದ್ದಾಗ ಮಾತ್ರ ತಪ್ಪಿನ ಅರಿವಿನಿಂದ ಮನಪರಿವರ್ತನೆ ಆಗಲು ಸಾಧ್ಯವಾಗುತ್ತದೆ ಎಂದು ಅವಧಿ ಪೂರ್ವ ಬಂಧಿ ಬಿಡುಗಡೆ ಸಮಿತಿ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಇಂದು (ಆ.14) ಸಂಜೆ ಧಾರವಾಡ ಕೇಂದ್ರ ಕಾರಾಗೃದಲ್ಲಿ ಬಂಧಿಗಳೆ ಅಭಿನಯಿಸಿದ್ದ ತಲೆದಂಡ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ, ವೀಕ್ಷಿಸಿ ಮಾತನಾಡಿದರು.

ಬಂಧಿಗಳ ಮನಪರಿವರ್ತನೆಗಾಗಿ ಜೈಲು ನಿಯಮಾವಳಿಗಳ ಪ್ರಕಾರ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಇತರ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಲಾಗುತ್ತಿದೆ ಎಂದರು.

ಬಂಧಿಗಳಿಗೆ ತಮ್ಮ ತಪ್ಪಿನ ಅರಿವು ಮೂಡಿ, ಜೀವನದಲ್ಲಿ ತಪ್ಪುಗಳು ಮರುಕಳಿಸದಂತೆ ಅವರು ಎಚ್ಚರವಹಿಸಬೇಕು. ಬಿಡುಗಡೆಯ ನಂತರದ ಬದುಕಿಗಾಗಿ ಓದು, ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದರು.

ಈಗಾಗಲೇ ಕಾರಾಗೃಹದ ಸುಮಾರು 100 ಕ್ಕೂ ಹೆಚ್ಚು ಮಹಿಳಾ ಖೈದಿಗಳು ಹಾಗೂ ವಿಚಾರಣಾದೀನ ಖೈದಿಗಳಿಗೆ ಕಸೂತಿ, ಟೇಲರಿಂಗ್ ಸೇರಿದಂತೆ ಸ್ವಉದ್ಯೋಗ ಆಧಾರಿತ ತರಬೇತಿಗಳನ್ನು ನೀಡಲಾಗಿದೆ. ಬಿಡುಗಡೆ ನಂತರದ ಬದುಕು ಉತ್ತಮವಾಗಿ ಅವರು ರೂಪಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಮನ ಪರಿವರ್ತನೆಗಾಗಿ ಉತ್ತಮ ಹವ್ಯಾಸಗಳನ್ನು ಅಳವಡಿಸಿಕೊಳ್ಳಬೇಕು. ಕಾರಾಗೃಹದಲ್ಲಿ ಉತ್ತಮ ಗ್ರಂಥಾಲಯವಿದೆ. ಅನೇಕ ಗ್ರಂಥಗಳಿವೆ. ಉಪಯೋಗಿಸಿಕೊಳ್ಳಬೇಕು ಎಂದರು.

ನಮ್ಮ ಬಗ್ಗೆ ಅರಿವು ಇದ್ದಾಗ ಆಂತರಿಕ ಬಂಧನ ನಮಗೆ ಸಾಧ್ಯವಾಗುತ್ತದೆ. ಆದರೆ ಅದರ ಅರಿವು ಇಲ್ಲದಿದ್ದಾಗ ಬಾಹ್ಯ ಬಂಧನ ಆಗುತ್ತದೆ. ತಿಳಿದೊ, ತಿಳಿಯದೊ ಮಾಡಿದ ತಪ್ಪಿಗೆ ಶಿಕ್ಷೆ ಆಗುತ್ತದೆ. ಶಿಕ್ಷಾ ಅವಧಿಯಲ್ಲಿ ನಮ್ಮ ಬಗ್ಗೆ ನಾವು ಚಿಂತನೆ ಮಾಡಿಕೊಳ್ಳಬೇಕು. ತಪ್ಪಿನ ಅರಿವಾಗಿ, ಸುಧಾರಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ತಲೆದಂಡ ನಾಟಕ ಅನೇಕ ನೀತಿ ಪಾಠಗಳನ್ನು ಕಲಿಸುತ್ತದೆ ಎಂದು ಅವರು ತಿಳಿಸಿದರು.



ಜೈಲು ಬಂಧಿಗಳ ಮನಸ್ಸು ಪರಿವರ್ತನೆಗಾಗಿ ರಂಗಾಯಣ ಉತ್ತಮ ನಾಟಕವನ್ನು ಆಯ್ಕೆ ಮಾಡಿ ಕಲಿಸಿದೆ. ಇಲ್ಲಿನ ಪಾತ್ರದಾರಿಗಳು ತಮ್ಮ ನಿಜ ಜೀವನದಲ್ಲಿ ಈ ತಲೆದಂಡ ನಾಟಕದ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ತಲೆದಂಡ ನಾಟಕದಲ್ಲಿ ಪಾತ್ರದಾರಿಗಳಾಗಿರುವ 20 ಕ್ಕೂ ಹೆಚ್ಚು ಖೈದಿಗಳು ಅದ್ಭುತವಾಗಿ ನಟನೆ ಮಾಡಿದ್ದಾರೆ. ಪಾತ್ರಗಳಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಈ ನಾಟಕ ಪ್ರಯೋಗದಿಂದ ಪಾತ್ರದಾರಿಗಳಲ್ಲಿ ಮತ್ತು ಪ್ರೇಕ್ಷಕ ಬಂಧಿಗಳಲ್ಲಿ ಸಾಕಷ್ಟು ಬದಲಾವಣೆ ಸಾಧ್ಯವಿದೆ ಎಂದು ಜಿಲ್ಲಾಧಿಕಾರಿಗಳು ನುಡಿದರು.

ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ, ಸಾಹಿತಿ ಪ್ರೊ.ವೀರಣ್ಣ ರಾಜೂರ ಅವರು ಕಲಾ ತರಬೇತಿ ಶಿಬಿರದ ಸಮಾರೋಪ ನುಡಿಗಳನ್ನಾಡಿದರು.

ಸಾಧನಾ ಸಂಸ್ಥೆಯ ಸಂಸ್ಥಾಪಕಿ ಇಸಾಬೆಲಾ ಝೇವಿಯರ್ ಅವರು ತಲೆ ದಂಡ ನಾಟಕ ಸಿದ್ದತೆ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ರಂಗಾಯಣ ನಿರ್ದೇಶಕ ರಾಜು ತಾಳಿಕೋಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿ, ಕಾರಾಗೃಹ ಬಂಧಿಗಳಿಗೆ ರಂಗ ತರಬೇತಿ ಶಿಬಿರ ಆಯೋಜಿಸಿರುವುದು ಧಾರವಾಡ ರಂಗಾಯಣದ ಹೊಸ ಪ್ರಯೋಗ. ರಂಗಭೂಮಿಯ ಕಲೆ, ನಟನೆಗಳು ಮನ ಪರಿವರ್ತನೆಯಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತವೆ. ಇದು ಪರಿಣಾಮಕಾರಿಯಾಗಿದೆ ಎಂದು ಹೇಳಿದರು.



ರಂಗಸಮಾಜದ ಸದಸ್ಯ ಮಹಾಂತೇಶ ಗಜೇಂದ್ರಗಡ ಮಾತನಾಡಿದರು. ಪ್ರಿಜನ್ ಮಿನಿಸ್ಟರಿ ಸದಸ್ಯೆ ಸ್ಯಾಲಿ ಡಿಸೋಜಾ, ಸಹಾಯಕ ಜೈಲು ಅಧೀಕ್ಷಕಿ ಬಿ.ಆರ್. ನಿರ್ಮಲಾ ವೇದಿಕೆಯಲ್ಲಿದ್ದರು.

ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ಸ್ವಾಗತಿಸಿದರು. ಶಿಕ್ಷಕ ಪಿ.ಬಿ.ಕುರಬೇಟ್ ವಂದಿಸಿದರು. ವೈಶಾಲಿ ನಾಯಕ ಕಾರ್ಯಕ್ರಮ ನಿರೂಪಿಸಿದರು.

ಕೇಂದ್ರ ಕಾರಾಗೃಹದ ತಿಂಗಳ ರಂಗ ತರಬೇತಿ ಶಿಬಿರವನ್ನು ಕಲ್ಲಪ್ಪ ಪೂಜಾರಿ, ಹರೀಶ ಜಿಂಕೆ ನಿರ್ದೇಶಿಸಿ, ಯಶಸ್ವಿಗೊಳಿಸಿದರು.

ಮನೋಜ್ಞವಾಗಿ ತಲೆದಂಡ ನಾಟಕ ಅಭಿನಯಿಸಿದ ಜೈಲು ಹಕ್ಕಿಗಳು: ಧಾರವಾಡ ರಂಗಾಯಣ ಕಳೆದ ಒಂದು ತಿಂಗಳಿಂದ ಧಾರವಾಡ ಕೇಂದ್ರ ಕಾರಾಗೃಹದಲ್ಲಿ ಆಯೋಜಿಸಿದ್ದ ರಂಗ ತರಬೇತಿಯಲ್ಲಿ ಮೂಡಿ ಬಂದ ಗಿರೀಶ ಕಾರ್ನಾಡ ಅವರ ರಚಿಸಿದ್ದ ಪ್ರಸಿದ್ದ ತಲೆದಂಡ ನಾಟಕವನ್ನು ಜೈಲು ಬಂಧಿಗಳು ಹಾಸ್ಯ ಕಲಾವಿದ, ಧಾರವಾಡ ರಂಗಶಯಣ ನಿರ್ದೇಶಕ ರಾಜು ತಾಳಿಕೋಟಿ ಅವರ ನಿರ್ದೇಶನದಲ್ಲಿ ಇಂದು ಅತ್ಯಂತ ಮನೋಜ್ಞವಾಗಿ, ಮನಮುಟ್ಟುವಂತೆ ಅಭಿನಯಿಸಿದರು.

ಜೈಲಿನ 20 ಕ್ಕೂ ಹೆಚ್ಚು ಬಂಧಿಗಳು ಹಾಗೂ ರಂಗಾಯಣದ ನಾಲ್ವರು ಮಹಿಳಾ ಕಲಾವಿಧರು ಸೇರಿ ತಲೆದಂಡ ನಾಟಕವನ್ನು ಉತ್ತಮವಾಗಿ ನಟಿಸಿದರು. ನಾಟಕ ಪ್ರದರ್ಶನದ ಒಂದುವರೆ ಗಂಟೆ ಅವಧಿ ಬಂಧಿಗಳ ಸೀಳ್ಳೆ, ಕೇಕೆ, ಕೂಗುಗಳಿಂದ ತುಂಬಿತ್ತು. ಪ್ರತಿ ಖೈದಿ ನಾಟಕ ವೀಕ್ಷಣೆಯಲ್ಲಿ ತಮ್ಮನ್ನು ಮಗ್ನರಾಗಿಸಿಕೊಂಡಿದ್ದರು.

ಇದೊಂದು ಧಾರವಾಡ ರಂಗಾಯಣ ಮತ್ತು ಸಾಧನಾ ಸಂಸ್ಥೆಯ ಜಂಟಿ ಸುಧಾರಣಾ ಕಾರ್ಯಕ್ರಮವಾಗಿತ್ತು.

ಜಿಲ್ಲಾಧಿಕಾರಿಗಳು ಸೇರಿದಂತೆ ವಿವಿಧ ಗಣ್ಯರು ಕೊನೆಯವರೆಗೂ ತಲೆದಂಡ ನಾಟಕವನ್ನು ತನ್ಮಯದಿಂದ ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

****

## ಮದ್ಯ ಮಾರಾಟ ನಿಷೇಧ

ಬೆಳಗಾವಿ, : ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನ ಉಗಾರಖುರ್ದ ಪುರಸಭಾ ವಾರ್ಡ ಸಂಖ್ಯೆ -15 ರ ಉಪ ಚುನಾವಣೆಯ ನಿಮಿತ್ಯ ಮದ್ಯ/ಬಾರ್ ಅಂಗಡಿಗಳನ್ನು ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಬಂದ ಮಾಡಲು ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ.

ವಿವಿಧ ಕಾರಣಗಳಿಂದ ತೆರವಾಗಿರುವ ಉಗಾರಖುರ್ದ ಪುರಸಭಾ ವಾರ್ಡ ಸಂಖ್ಯೆ-15 ಉಪ ಚುನಾವಣೆಯ ನಿಮಿತ್ಯ ದಿನಾಂಕ: 16-08-2025 ರಂದು ಬೆಳಿಗ್ಗೆ 6 ಗಂಟೆಯಿಂದ ದಿನಾಂಕ: 18-08-2025 ರಂದು ಬೆಳಿಗ್ಗೆ 6 ಗಂಟೆಯವರೆಗೆ ಉಗಾರಖುರ್ದ ಪುರಸಭಾ ವ್ಯಾಪ್ತಿಯಡಿ ನೀತಿ ಸಂಹಿತೆ ಜಾರಿಯಲ್ಲಿರುವ ಅವಧಿಯಲ್ಲಿ ನೀತಿ ಸಂಹಿತೆಯು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಮಾತ್ರ ಮದ್ಯ ಮಾರಾಟವನ್ನು ನಿಷೇಧಿಸಿ ಮದ್ಯ/ಬಾರ ಅಂಗಡಿಗಳನ್ನು ಬಂದ್ ಮಾಡಲು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿರುತ್ತಾರೆ.

## ಇಂದು ಕೊಪ್ಪಳದಲ್ಲಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

ಕೊಪ್ಪಳ : ಜೆಸ್ಕಾಂ ಕೊಪ್ಪಳ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಿದ್ಯುತ್‌ಚ್ಛಕ್ತಿ ಗ್ರಾಹಕರ ವಿದ್ಯುತ್‌ಚ್ಛಕ್ತಿಗೆ ಸಂಬಂಧಿಸಿದ ಅಹವಾಲುಗಳು ಮತ್ತು ಕುಂದು-ಕೊರತೆಗಳನ್ನು ಪರಿಹರಿಸಲು ವಿದ್ಯುತ್ ಗ್ರಾಹಕರ ಕುಂದುಕೊರತೆಗಳ ಸಭೆಯನ್ನು ಆಗಸ್ಟ್ 16 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳದ ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಕಛೇರಿಯಲ್ಲಿ ಆಯೋಜಿಸಲಾಗಿದೆ.

ಸಂಬಂಧಿಸಿದ ವಿದ್ಯುತ್ ಗ್ರಾಹಕರು ಸಭೆಗೆ ಹಾಜರಾಗಿ ವಿದ್ಯುತ್‌ಗೆ ಸಂಬಂಧಿಸಿದ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು ಜೆಸ್ಕಾಂ ಕೊಪ್ಪಳ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆ. 19 ರಂದು ಕೊಪ್ಪಳ ತಾ.ಪಂ ಸಾಮಾನ್ಯ ಸಭೆ

ಕೊಪ್ಪಳ : ಕೊಪ್ಪಳ ತಾಲೂಕು ಪಂಚಾಯತಿ ಸಾಮಾನ್ಯ ಸಭೆಯನ್ನು ಆಗಸ್ಟ 19 ರಂದು ಬೆಳಿಗ್ಗೆ 10.30 ಗಂಟೆಗೆ ತಾ.ಪಂ. ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕೊಪ್ಪಳ ತಾಲೂಕ ಪಂಚಾಯತ್ ಆಡಳಿತಾಧಿಕಾರಿಗಳು ಆಗಿರುವ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಪ್ರಕಾಶ ವಡ್ಡರ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ತಾಲೂಕು ಮಟ್ಟದ ಎಲ್ಲಾ ಅನುಷ್ಠಾನಾಧಿಕಾರಿಗಳು ಪ್ರಸಕ್ತ ಸಾಲಿನ ಏಪ್ರಿಲ್ 1 ರಿಂದ ಜುಲೈ 31ರ ವರೆಗೆ ಸಾಧಿಸಿದ ಪ್ರಗತಿ ವರದಿಯೊಂದಿಗೆ ಪ್ರತಿನಿಧಿಗಳನ್ನು ಕಳುಹಿಸದೇ ತಪ್ಪದೇ ಖುದ್ದಾಗಿ ಸಭೆಗೆ ಹಾಜರಾಗಬೇಕು ಎಂದು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳು ಮಾನವ ಲೋಕದ ಸುಂದರ ಪುಷ್ಪಗಳು - ಸಂಗಮೇಶ ಬಬಲೇಶ್ವರ



ಧಾರವಾಡ : ಮಕ್ಕಳು ಮಾನವ ಲೋಕದ ಸುಂದರ ಪುಷ್ಪಗಳಾಗಿದ್ದು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ನಮೆಲ್ಲರ ಜವಾಬ್ದಾರಿಯಾಗಿದೆ. ಇಂದು ದೇಶಾದ್ಯಂತ ಆಚರಿಸುವುತ್ತಿರುವ ಸ್ವಾತಂತ್ರೋತ್ಸವ ಅರ್ಥಪೂರ್ಣವಾಗಬೇಕಾದರೆ, ಮಕ್ಕಳಲ್ಲಿ ದೇಶಾಭಿಮಾನ ಬೆಳೆಸಬೇಕಾದ ಅಗತ್ಯವಿದೆ. ನಾವೆಲ್ಲ ಮಾಧ್ಯಮದಲ್ಲಿ ಗಮನಿಸಿರುವಂತೆ ಶಾಲೆಗಳಲ್ಲಿ ಮೊಟ್ಟೆ ವಿತರಿಸುವ ವಿಚಾರದಲ್ಲಿ ಹಾಗೂ ಅಡುಗೆಯವಳು ಬೇರೆ ಕೋಮಿನವಳು ಎನ್ನುವ ಕಾರಣಕ್ಕೆ ಶಾಲೆ ಮಕ್ಕಳನ್ನು ಬೇರೆ ಕಡೆಗೆ ಟಿ.ಸಿ ಕಿತ್ತುಕೊಂಡು ಹೋಗಿ ಪ್ರವೇಶ ಕೊಡಿಸುತ್ತಿರುವ ಪಾಲಕರ ಮನಸ್ಥಿತಿ ಬದಲಾಗಬೇಕಾಗಿದೆ. 79 ನೇ ಸ್ವಾತಂತ್ರೋತ್ಸವ ಆಚರಿಸುವುತ್ತಿರುವ ನಾವು ಈ ಸಂದರ್ಭದಲ್ಲಿ ಈ ಕುರಿತು ಗಂಭೀರವಾದ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಎಂದು ಅಧ್ಯಕ್ಷರು ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ ಸಂಗಮೇಶ ಬಬಲೇಶ್ವರ ಹೇಳಿದರು.

ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ ಕೇಂದ್ರ ಕಛೇರಿಯಲ್ಲಿ 79ನೇ ಸ್ವಾತಂತ್ರೋತ್ಸವ ಧ್ವಜಾರೋಹಣ ನೆರವೇರಿಸಿ ಬಾಲಮಂದಿರ ಮಕ್ಕಳಿಗಾಗಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಾಲಮಂದಿರದ ಮಕ್ಕಳು ಭಕ್ತಿ ಗೀತೆ , ಭಾವಗೀತೆ, ಪಪೇಟ ಶೋ ಹಾಗೂ ಯೋಗ ನೃತ್ಯವನ್ನು ಪ್ರದರ್ಶಿಸಿ ಎಲ್ಲರ ಗಮನವನ್ನು ಸೆಳೆದರು. ಈ ಸಂದರ್ಭದಲ್ಲಿ ಪಾಲ್ಗೊಂಡ ಎಲ್ಲ ಮಕ್ಕಳಿಗೂ ಪುಸ್ತಕಗಳನ್ನು ವಿತರಿಸಿದರು.

ಕಾರ್ಯಕ್ರಮದಲ್ಲಿ ಯೋಜನಾಧಿಕಾರಿಗಳಾದ ರವೀಂದ್ರ ರತ್ನಾಕರ (ಪ್ರ), ಆಪ್ತಕಾರ್ಯದರ್ಶಿ ಅನ್ನಪೂರ್ಣ ಸಂಗಳದ, ದೀಪಾ ಜಾವೂರ, ಅರ್ಚನಾ ಮಧುಶ್ರೀ, ಮೀನಾಕ್ಷಿ ಮೆಡ್ಲೇರಿ, ಪುಷ್ಪಾ ಹಂಜಗಿ, ಸುಭಾಷ ಚಂದ್ರಗಿರಿ, ಪದ್ಮಶ್ರೀ ಮೇಟಿ, ಸುವರ್ಣಲತಾ ಮಠದ, ಅರ್ಪಿತಾ, ರಾಜೇಶ್ವರಿ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

****

### ಮಳೆಯ ನಡುವೆಯೂ ಅದ್ಧೂರಿಯಾಗಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ

# ದೇಶಕ್ಕೆ ಸ್ವಾತಂತ್ರ್ಯ ಪುಕಟ್ಟೆ ಬಂದಿಲ್ಲ- ಬಲಿದಾನ ನಡೆದಿದೆ-ಸವದಿ

ತೇರದಾಳ-ಬ್ರಿಟಿಷರ ಕಪಿಮುಷ್ಠಿಯಿಂದ ಭಾರತ ದೇಶಕ್ಕೆ ಸ್ವಾತಂತ್ರ್ಯ ಪುಕ್ಕಟ್ಟೆ ಬಂದಿಲ್ಲ. ಬದಲಾಗಿ ಸಾವಿರಾರು ದೇಶಪ್ರೇಮಿಗಳ ಬಲಿದಾನವಾಗಿದೆ ಎಂಬುದನ್ನು ದೇಶದ ಪ್ರತಿಯೊಬ್ಬ ನಾಗರಿಕ ಅರಿಯಬೇಕಿದೆ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ತೇರದಾಳ ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿದ್ದ ಸ್ವಾತಂತ್ರೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉಗ್ರವಾದಿಗಳ ಸಂವಾಹರಕ್ಕೆ ದೇಶದ ಸೇನೆ ಬಲಾಢ್ಯವಾಗಿದೆ. ಆದರೆ ದೇಶದಲ್ಲಿನ ನಾವುಗಳು ಮೊದಲು ಒಗ್ಗಟ್ಟಿನಿಂದ ನಡೆಯಬೇಕಿದೆ ಎಂದು ಹೇಳಿದರು. ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ತಹಸೀಲ್ದಾರ್ ವಿಜಯಕುಮಾರ ಕಡಕೋಳ, ತೇರದಾಳ ತಾಲೂಕಿಗೆ ಪ್ರಜಾಸೌದ ಕಟ್ಟಡಕ್ಕೆ ಸರಕಾರ ಅನುದಾನ ಮಂಜುರಾತಿ ನೀಡಿದೆ. ಕಟ್ಟಡಕ್ಕೆ ಜಾಗವನ್ನು ಗುರುತಿಸಲಾಗಿದ್ದು, ಶೀಘ್ರದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು. ಇನ್ನೂ ನಿರಂತರವಾಗಿ ಸುರಿಯುತ್ತಿರುವ ಮಳೆಯ ನಡುವೆಯೂ ಶಾಲಾ ಮಕ್ಕಳು, ಶಿಕ್ಷಕರು, ಅಧಿಕಾರಿಗಳು, ಮಾಜಿ ಯೋಧರು, ದೇಶಾಭಿಮಾನಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮಕ್ಕೆ ಮೆರಗು ನೀಡಿದರು. ವಿವಿಧ ಶಾಲಾ ಮಕ್ಕಳಿಂದ ವೇಷಭೂಷಣ, ಪರೇಡ್ ಕಾರ್ಯಕ್ರಮಗಳು ಜರುಗಿದವು. ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ನೂತನವಾಗಿ ಆಗಮಿಸಿದ ಅಧಿಕಾರಿಗಳಿಗೆ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಉಪತಹಸೀಲ್ದಾರ್ ಶ್ರೀಕಾಂತ ಮಾಯನ್ನವರ, ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಉಪಾಧ್ಯಕ್ಷೆ ನಸ್ರೀನ್‌ಬಾನು ನಗಾರ್ಜಿ, ಸ್ಥಾಯಿ ಸಮಿತಿ ಚೇರಮನ್ ಕುಮಾರ ಸರಿಕರ, ಮುಖ್ಯಾಧಿಕಾರಿ ಎಫ್.ಬಿ. ಗಿಡ್ಡಿ, ಉಪನೋಂದಣಾಧಿಕಾರಿ ಎಸ್.ಪಿ. ಮುತ್ತಪ್ಪಗೋಳ, ಪಿಎಸ್‌ಐ ಎಸ್. ಕೆ. ಸಿಂಗನ್ನವರ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಮಲ್ಲಿಕಾರ್ಜುನ ಬಿರಾದಾರಪಾಟೀಲ, ರೇವಣಸಿದ್ದಯ್ಯ ಕಮತೆ, ಬಿ.ಎಂ. ಹಳೇಮನಿ, ಸಂಜು ಬಾನೆ ಸೇರಿದಂತೆ ಮಾಜಿ ಸೈನಿಕರು, ಅಧಿಕಾರಿಗಳು, ಪುರಸಭೆ ಸದಸ್ಯರು ಮುಖಂಡರು ಇದ್ದರು.



# ತೇರದಾಳ ಎಲ್ಲೆಡೆ ಹಾರಾಡಿದ ತಿರಂಗಾ

ತೇರದಾಳ-ಇಲ್ಲಿನ ಟಿಎಪಿಸಿಎಂಎಸ್ ಶಾಖೆಯಲ್ಲಿ ತಾಲೂಕು ನಿರ್ದೇಶಕ ಕಾಶಿನಾಥ ಕಾಲತಿಪ್ಪಿ, ಸಿದ್ದೇಶ್ವರ ಗಲ್ಲಿಯಲ್ಲಿ ಮಾಜಿ ಸೈನಿಕ ಸಿದ್ಧಾರೂಢ ಉಪ್ಪಾರ, ಶ್ರೀನಿಧಿ ಬ್ಯಾಂಕಿನಲ್ಲಿ ಚೇರಮನ್ ಮಹೇಶ ಯಾದವಾಡ, ಅಲ್ಲಪ್ರಭು ಖಾದಿ ಭಂಡಾರದಲ್ಲಿ ಬಸಪ್ಪ ಮುಕರಿ, ಸರಕಾರಿ ಕೆಜಿಎಸ್ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಮಹಾವೀರ ನಂದಗಾಂವ, ತೇರದಾಳ ವರ್ತಕರ ಬ್ಯಾಂಕಿನಲ್ಲಿ ಅಧ್ಯಕ್ಷ ಉಸ್ಮಾನ ಮುಜಾವರ, ಸರಕಾರಿ ಉರ್ದು ಪ್ರೌಢಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಅಲ್ತಾಪ ಹನಗಂಡಿ, ಪಿಕೆಪಿಎಸ್ ಪಶ್ಚಿಮ ಭಾಗ ಬ್ಯಾಂಕಿನಲ್ಲಿ ಚೇರಮನ್ ರಮೇಶ ಕಿತ್ತೂರ, ಸರಕಾರಿ ಚಾವಡಿಯಲ್ಲಿ ಗ್ರಾಮ ಆಡಳಿತಾಧಿಕಾರಿ ರೇವಣಸಿದ್ಧಯ್ಯ ಕಮತೆ, ಮಂಜುನಾಥ ಬ್ಯಾಂಕಿನಲ್ಲಿ ಅಧ್ಯಕ್ಷ ಗಣಪತಿ ಗಾಡಿವಡ್ಡರ, ಅಮನ್ ಬ್ಯಾಂಕಿನಲ್ಲಿ ಅಧ್ಯಕ್ಷ ಮುಸ್ತಾಕ ಸಂಗತ್ರಾಸ, ತಹಸೀಲ್ದಾರ್ ಕಚೇರಿಯಲ್ಲಿ ತಹಸೀಲ್ದಾರ್ ವಿಜಯಕುಮಾರ ಕಡಕೋಳ, ಪ್ರಭುಲಿಂಗ ಬ್ಯಾಂಕಿನಲ್ಲಿ ಅಧ್ಯಕ್ಷ ಧರೆಪ್ಪ ಕಿತ್ತೂರ, ಬಾಪೂಜಿ ಬ್ಯಾಂಕಿನಲ್ಲಿ ಉದಯ ಬೆಳಗಲಿ, ಪಿಕೆಪಿಎಸ್ ಬ್ಯಾಂಕಿನಲ್ಲಿ ಅಧ್ಯಕ್ಷ ಸುನೀಲ ಆಳಗೊಂಡ, ಉಪನೋಂದಣಿ ಕಚೇರಿಯಲ್ಲಿ ನೋಂದಣಾಧಿಕಾರಿ ಎಸ್.ಪಿ. ಮುತ್ತಪ್ಪಗೋಳ, ಪೊಲೀಸ್ ಠಾಣೆಯಲ್ಲಿ ಠಾಣಾಧಿಕಾರಿ ಎಸ್.ಕೆ. ಸಿಂಗನ್ನವರ, ಸಿದ್ದೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕಾಶಿನಾಥ ತಳ್ಳಿ, ಪುರಸಭೆಯಲ್ಲಿ ಅಧ್ಯಕ್ಷೆ ಶಿಲ್ಪಾ ರೋಡಕರ 79ನೇ ಸ್ವಾತಂತ್ರ್ಯೋತ್ಸವದ ರಾಷ್ಟ್ರ ಧ್ವಜಾರೋಹಣ ನೇರವೇರಿಸಿದರು.



## ಜಿಲ್ಲಾಡಳಿತದಿಂದ ಸಮಾಜವೀರ ಪತ್ರಿಕೆಯ ಸಂಪಾದಕ ಮುಜಫರ್ ಶಾಲಗಾರ ಅವರಿಗೆ ಸನ್ಮಾನ



ಬಾಗಲಕೋಟೆ: ಇಂದು ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಸ್ವಾತಂತ್ರ್ಯೋತ್ಸವ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಾಧಕ-ರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮದಲ್ಲಿ ಉತ್ತಮ ಸೇವೆ ಸಲ್ಲಿಸಿದಕ್ಕಾಗಿ ಸಮಾಜವೀರ ಕನ್ನಡ ಪ್ರಾದೇಶಿಕ ದಿನ ಪತ್ರಿಕೆಯ ಸಂಪಾದಕ ಮುಜಫರ್ ಶಾಲಗಾರ ಇವರಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ. ತಿಮ್ಮಾಪುರ ಅವರು ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ವಿಶ್ವವಾಣಿ ವರದಿಗಾರ ಅಭಿಷೇಕ ಪಾಟೀಲ ಅವರಿಗೆ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಹೆಚ್. ವಾಯ್. ಮೇಟಿ, ಲೋಕಸಭಾ ಸದಸ್ಯ ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್. ಪೂಜಾರ, ಹನುಮಂತ ನಿರಾಣಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕನ್ನವರ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ್ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ ಧಲಭಂಜನ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಮನುಷ್ಯನಿಗೆ ಹಲ್ಲುಗಳು ಅತೀ ಮಹತ್ವದ ಅಂಗ- ಡಾ॥ ಪರಮಾನಂದ ಬಿರಾದಾರ



ಇಂಡಿ : ಮನುಷ್ಯನಿಗೆ ಹಲ್ಲುಗಳು ಅತೀ ಮಹತ್ವದ ಅಂಗ. ಅಹಾರ ಚೆನ್ನಾಗಿ ನುರಿಸಲು ದಂತಗಳ ಕಾರ್ಯ ಮಹತ್ವದ್ದು ಹೀಗಾಗಿ ನಾವು ದಂತಗಳ ಕಾಳಜಿ ಮಾಡಬೇಕಾದ ಅವಶ್ಯಕತೆ ಇದೆ ಎಂದು ಡಾ॥ ಪರಮಾನಂದ ಬಿರಾದಾರ ಹೇಳಿದರು.

ಪಟ್ಟಣದ ನಿಲೇಶ ಇವಣಿ ಇವರ ಆಸ್ಪತ್ರೆಯಲ್ಲಿ ಸ್ವಾತಂತ್ರ್ಯೋತ್ಸವ ನಿಮಿತ್ಯ ನಡೆದ ಉಚಿತ ದಂತ ಚಿಕಿತ್ಸೆ ಶಿಬಿರದಲ್ಲಿ ಮಾತನಾಡುತ್ತಿದ್ದರು.

ಮನುಷ್ಯನಿಗೆ ಎಲ್ಲ ಅಂಗಾಂಗಗಳಂತೆ ಹಲ್ಲು ಕೂಡ ಅಷ್ಟೇ ಮುಖ್ಯ. ಎಲ್ಲ ಅಂಗಗಳಿಗೆ ಮಹತ್ವ ನೀಡಿದಂತೆ ಹಲ್ಲಿಗೂ ಮಹತ್ವ ನೀಡಿ ಅದರ ಆರೈಕೆ ಆರೋಗ್ಯಕ್ಕೆ ಉತ್ತಮ ಎಂದರು.

ವೈದ್ಯ ನಿಲೇಶ ಇವಣಿ ಮಾತನಾಡಿ ದಂತುಗಳಿಗೆ ಅಲೈನರ್ಸ,ಸೆರಾಮಿಕ ತಂತಿ,ಹಲ್ಲು ಸ್ವಚ್ಛ ಗೊಳಿಸುವದು, ಡಿಜಿಟಲ್ ಎಕ್ಸರೇ, ರೂಟ್ ಕೆನಲ್ ಚಿಕಿತ್ಸೆ, ಚಿಕ್ಕ ಮಕ್ಕಳ ಹಲ್ಲಿನ ಚಿಕಿತ್ಸೆ, ಹಲ್ಲು ಕೀಳುವರು, ಅಕಲ್ ಹಲ್ಲು ಕೀಳುವದು,ಹಲ್ಲು ಸ್ವಚ್ಛ ಗೊಳಿಸುವದು,ಹಲ್ಲಿನ ಸೆಟ್, ನಗುವಿನ ವಿನ್ಯಾಸ,ಕ್ಯಾಪ ಮತ್ತು ಬ್ರಿಡ್ಜ ಫಿಕ್ಸೆಡ್ ಹಲ್ಲಿನ ಸೆಟ್ ಮುಂತಾದ ಕಾಳಜಿಗಳಗೆ ದಂತ ವೈದ್ಯರನ್ನು ಭೇಟಿ ನೀಡಿ ಆರೈಕೆ ತೆಗೆದುಕೊಳ್ಳುವದು ಉತ್ತಮ.

ಡಾ॥ ಲಕ್ಷ್ಮೀಕಾಂತ ಮೇತ್ರಿ, ಚಂದ್ರಶೇಖರ ಇವಣಿ, ಮಹೇಶ ಝುಂಪಾ, ಉಮೇಶ ಬಳಬಟ್ಟಿ, ಡಾ॥ ವಿಪುಲ್ ಕೋಳೆಕರ ಮತ್ತಿತರರು ಉಪಸ್ಥಿತರಿದ್ದರು. ಸುಮಾರು 300 ಕ್ಕೂ ಹೆಚ್ಚು ಜನರು ಉಚಿತ ದಂತ ಚಿಕಿತ್ಸೆ ಲಾಭ ಪಡೆದರು.

***

## ವಿದ್ಯಾರ್ಥಿಗಳಿಗೆ 7 ಸಾವಿರ ಆಫರ್ ಹಣ ನೀಡದ ಶಿಕ್ಷಕ



ಮಹಾಲಿಂಗಪುರ : ಸಮೀಪದ ನಂದಗಾಂವ ಗ್ರಾಮದ ಮ್ಯಾಗಾಡಿ ತೋಟದ ಸರಕಾರಿ ಪ್ರಾಥ-ಮಿಕ ಶಾಲೆಯ ಸ್ವಾಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಶಿಕ್ಷಕ ವಿ.ಎಸ್. ಘೋರ್ಪಡೆ ತಮ್ಮ 7 ಜನ ವಿದ್ಯಾರ್ಥಿಗಳಿಗೆ ತಲಾ 1 ಸಾವಿರ ರೂ.ಗಳಂತೆ ಒಟ್ಟು 7 ಸಾವಿರ ರೂ. ನೀಡುವ ಮೂಲಕ ಕೊಟ್ಟ ಮಾತಿನಂತೆ ನಡೆದುಕೊಂಡರು. ಮಕ್ಕಳ ದಾಖಲಾತಿ ಕಡಿಮೆಯಾಗಿ ಶಾಲೆಗೆ ಬೀಗ ಹಾಕುವ ಸಂದರ್ಭ ಬಂದಾಗ ಇಲಾಖೆಯ ಆದೇಶದಂತೆ ಈ ಶಾಲೆಗೆ ಎಸ್.ವಿ.ಘೋರ್ಪಡೆ ಅವರು ನಿಯೋಜನೆಗೊಂಡಿದ್ದರು. ಆರಂಭದಲ್ಲಿ ದಾಖಲಾತಿ ಹೆಚ್ಚಿಸಲು ಸ್ವಂತ ಜೇಬಿನಿಂದ ತಲಾ 1 ಸಾವಿರ ರೂ. ನೀಡುವುದಾಗಿ ಘೋಷಿಸಿದ್ದರು. ಕೊಟ್ಟ ಮಾತಿನಂತೆ ಸ್ವಾತಂತ್ರ್ಯೋತ್ಸವ ದಿನದಂದು 7 ಜನ ವಿದ್ಯಾರ್ಥಿಗಳಿಗೆ ತಲಾ 1 ಸಾವಿರ ರೂ.ಗಳಂತೆ ಒಟ್ಟು 7 ಸಾವಿರ ರೂ. ನೀಡಿದರು.

ಶಿಕ್ಷಣ ಇಲಾಖೆ ಸಂಪನ್ಮೂಲ ವ್ಯಕ್ತಿ ನವೀನ ಜಿಗಜಿನ್ನಿ, ಎಸ್ಡಿಎಂಸಿ ಅಧ್ಯಕ್ಷ ಮಹಾಲಿಂಗ ಮಟಗಾರ, ಉಪಾಧ್ಯಕ್ಷೆ ಮಹಾನಂದ ಕೋಳಿ, ಶಾಲೆಯ ಭೂದಾನಿ ತಂಗೆವ್ವ ಮ್ಯಾಗಾಡಿ, ಪ್ರಕಾಶ ಡಂಗಿ, ಅಂಗನವಾಡಿ ಕಾರ್ಯಕರ್ತೆಯರು, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಅರ್ಜಿ ಆಹ್ವಾನ

ಬಾಗಲಕೋಟೆ, : ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ಬೆಂಗಳೂರು ಅಂತರಾಷ್ಟ್ರೀಯ ನೇಮಕಾತಿ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದ್ದು ರಾಜ್ಯದ ವಿದ್ಯಾರ್ಥಿಗಳಿಗೆ ಜಾಗತಿಕ ಉನ್ನತ ಶಿಕ್ಷಣದ ಅವಕಾಶಗಳನ್ನು ಪರಿಚಯಿಸುವ ಉದ್ದೇಶದಿಂದ ಆ.17 ರಂದು ಬೆಂಗಳೂರುನಲ್ಲಿರುವ ದಿ ಲಲಿತ ಅಶೋಕ ಹೋಟಲನಲ್ಲಿ ,ಣಣಜಥಿ ಂಭಡಿಂಚಿಜ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು **https://studyabroad.ksdckarnataka.com** ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಕೌಶಲ್ಯಾಭಿವೃದ್ಧಿ,ಉ-ದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ,ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಆಡಳಿತ ಬವನ ರೂ ನಂ:118 ಮತ್ತು ದೂರವಾಣಿ ಸಂ:08354-295210 ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಭ್ರಮದ ಸ್ವಾತಂತ್ರ್ಯೋತ್ಸವ.: ಮುಖ್ಯ ಶಿಕ್ಷಕಿ ಶ್ರೀಮತಿ ಕೆ. ಸುನಂದಾ

ವಿಜಯಪುರ:-ನಗರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ 30 ವಿವೇಕನಗರದಲ್ಲಿ 79 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಸಡಗರ ಸಂಭ್ರಮದಿಂದ ಅದ್ದೂ-ರಿಯಾಗಿ ಆಚರಿಸಲಾಯಿತ್ತು. ಇಂದಿನ ಮಕ್ಕಳು ವೈಜ್ಞಾನಿಕ ಮನೋಭಾವನೆಯನ್ನ ಬೆಳೆಸಿಕೊಂಡು ದೇಶದ ಪ್ರಗತಿಯತ್ತ ಸಾಗುವಂತವರಾಗಬೇಕು ಸ್ವಾತಂತ್ರ್ಯದ ನಿಜವಾದ ಅರ್ಥವನ್ನ ಅರಿತುಕೊಂಡು ಬದುಕನ್ನು ಉಜ್ವಲಗೊಳಿಸಿಕೊಳ್ಳ ಬೇಕು ಎಂದು ಎಸ್ ಡಿ ಎಮ್ ಸಿ ಅಧ್ಯಕ್ಷರಾದ ಶ್ರೀ ಸುರೇಶ ದೇಸಾಯಿ ಯವರು ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.



ಶಾಲೆಯ ಮುಖ್ಯ ಗುರುಮಾತೆ ಶ್ರೀಮತಿ ಕೆ. ಸುನಂದಾ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಇದೇ ಸಂದರ್ಭದಲ್ಲಿ ಸದಸ್ಯರಾದ ಸುಭಾಷ್ ಪಂಚಗಟ್ಟಿ, ನಿವೃತ್ತ ಮುಖ್ಯ ಗುರುಗಳಾದ ಪ್ರಕಾಶ ಬಡಿಗೇರ ಮಾತನಾಡಿದರು. ಸ್ವಾತಂತ್ರ್ಯ ಹೋರಾಟಗಾರರ ಗಣ್ಯಮಾನ್ಯರ ಸುಮಾರು ಹದಿನೈದು ಭಾವಚಿತ್ರಗಳನ್ನು ಶಾಲೆಗೆ ದೇಣಿಗೆಯಾಗಿ ನೀಡಿ ಶ್ರೀಮತಿ ವಿಜಯಲಕ್ಷ್ಮಿ ಪಾಟೀಲರವರು ಮಾತನಾಡಿದರು.

ಶ್ರೀಮತಿ ಶಿರೀನ ಕೀಜಿ, ಎಸ್ ಎನ್ ಬರಗುಡಿ, ಅಶೋಕ್ ಚವ್ಹಾಣ, ಟಿ ಸಿ ನಾಟಿಕಾರ ವಂದಿಸಿದರು. ಮುದ್ದು ಮಕ್ಕಳು ಅಡಿಗೆ ಮಾತೆಯರು, ಪಾಲಕರು ಉಪಸ್ಥಿತ-

## ಹಲವಾರು ಮಹಿನೀಯರ ತ್ಯಾಗ ಬಲಿದಾನದ ದಿಂದ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ

ಗೋಕಾಕ: ಹಲವಾರು ಮಹಿನೀಯರ ತ್ಯಾಗ ಬಲಿದಾನದ ದಿಂದ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ ಎಂದು ತಹಶೀಲ್ದಾರ್ ಡಾ.ಮೋಹನ ಭಸ್ಮೆ ಹೇಳಿದರು.

ಶುಕ್ರವಾರದಂದು ನಗರದ ವಾಲ್ಮೀಕಿ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತ್, ನಗರಸಭೆ, ಶಿಕ್ಷಣ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ 79ನೇ ಸ್ವಾತಂತ್ರೋತ್ಸವದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೇರವೇರಿಸಿ ಅವರು ಮಾತನಾಡಿದರು.

ನಮ್ಮ ಸ್ವಾತಂತ್ರ್ಯದೊಂದಿಗೆ ಪರಿಸರದ ಸ್ವಾತಂತ್ರ್ಯವನ್ನು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಸ್ವಾತಂತ್ರ್ಯವನ್ನು ಹೇಗೆ ಉಪಯೋಗಿಸಕೊಳ್ಳಬೇಕು ಎಂದು ಡಾ.ಬಾಬಾಸಾಬೇಬ ಅಂಬೇಡ್ಕರ್. ಸಂವಿಧಾನದ ಮೂಲಕ ಹೇಳಿಕೊಟ್ಟಿದ್ದಾರೆ.

ನಮ್ಮ ಸುತ್ತಲಿನ ಪರಿಸರವನ್ನು ಸಹ ನಾವು ವಿಷಮುಕ್ತವಾಗಿ ಮಾಡಿಕೊಳ್ಳಬೇಕು.



ಪ್ಲಾಸ್ಟಿಕ್ ಮುಕ್ತ ಭಾರತ ನಿರ್ಮಿಸಲು ಎಲ್ಲರೂ ಸಹಕರಿಸಬೇಕು. ಭಾರತ ಇಂದು ತಂತ್ರಜ್ಞಾನ ಸೇರಿದಂತೆ ಇತರ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ದೇಶದ ಸುಸ್ಥಿರ ಅಭಿವೃದ್ಧಿಗೆ ದೇಶದ ಎಲ್ಲಾ ಪ್ರಜೆಗಳು ಕೈಜೋಡಿಸಬೇಕು ಎಂದು ಹೇಳಿದ ಅವರು ನಮ್ಮ ಸಮಾಜ ಸುಂದರವಾಗಿಸಲು ನಾವು ಸಹಕಾರ ನೀಡಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿವಿಧ ಸ್ವರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ನಂತರ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಈ ಸಂದರ್ಭದಲ್ಲಿ ನರಗಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ಉಪಾಧ್ಯಕ್ಷರು ಶ್ರೀಮತಿ ಬೀಬಿಬತುಲ್ ಜಮಾದಾರ, ಡಿ.ವಾಯ.ಎಸ್.ಪಿ. ರವಿ ನಾಯಿಕ, ಸಿಪಿಐ ಸುರೇಶ್ ಬಾಬು , ಅಶೋಕ್ ಪೂಜಾರಿ, ಬಿ.ಇ.ಓ ಜಿ.ಬಿ.ಬಳಗಾರ, ಪೌರಾಯುಕ್ತ ರವಿ ರಂಗಸಭೆ , ತಾ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಗಸ್ತೆ, ಹಿರಿಯ ನ್ಯಾಯವಾದಿ ಬಿ.ಆರ.ಕೊಪ್ಪ, ಎಂ.ಎಲ್.ಜನ್ಮಟ್ಟಿ, ಎಂ.ಎಂ.ನಧಾಫ್, ಎಂ.ಎಚ್.ಗಜಾಕೋಶ, ಡಾ.ಎಂ.ಎಸ್.ಕೊಪ್ಪದ, ಪಿಎಸ್ಐ ಕೆ ವಾಲಿಕರ, ಕರ್ನಾಟಕ ರಕ್ಷಣಾ ವೇದಿಕೆಯ ಬಸವರಾಜ ಖಾನಪ್ಪನವರ, ಕಿರಣ ಢಮಾಮಗರ, ರೋಟರಿ ಸಂಸ್ಥೆಯ ಸೋಮಶೇಖರ್ ಮಗದುಮ್ಮ, ನಗರಸಭೆ ಸದಸ್ಯರು ಉಪಸ್ಥಿತರಿದ್ದರು.

# 79ನೇ ಸ್ವಾತಂತ್ರ್ಯೋತ್ಸವದ ಸಂದೇಶ : ನಮ್ಮ ಸರ್ಕಾರದ ಮೂಲ ಉದ್ದೇಶ ಜನಪರ ಆಡಳಿತವನ್ನು ಜನಸಾಮಾನ್ಯರಿಗೆ ತಲುಪಿಸುವುದು

# ಎಲ್ಲರ ಒಳಿತಿಗಾಗಿ ನಮ್ಮ ಸರ್ಕಾರ ಬದ್ಧವಾಗಿದೆ : ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಎಸ್ ಲಾಡ್

ಧಾರವಾಡ : ಸ್ವಾತಂತ್ರ್ಯ ದಿನವು ಕೇವಲ ರಜಾದಿನವಲ್ಲ, ಬದಲಾಗಿ ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಧನ್ಯವಾದ ಹೇಳಲು ಮತ್ತು ಅವರ ಮೌಲ್ಯಗಳನ್ನು ನೆನಪಿಸಿಕೊಳ್ಳಲು ಒಂದು ಅವಕಾಶ. ನಮ್ಮ ಧ್ವಜವನ್ನು ಹಾರಿಸುವುದು, ನಮ್ಮ ಇತಿಹಾಸವನ್ನು ನೆನಪಿಸಿಕೊಳ್ಳುವುದು ಮತ್ತು ಏಕತೆಯ ಮನೋಭಾವವನ್ನು ರೂಢಿಸಿಕೊಳ್ಳುವ ದಿನವಾಗಿದೆ ಎಂದು ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಎಸ್ ಲಾಡ್ ಅವರು ಹೇಳಿದರು.

ಅವರು ಇಂದು ಬೆಳಿಗ್ಗೆ ಧಾರವಾಡ ಜಿಲ್ಲಾಡಳಿತವು ಆರ್ಎನ್ ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 79ನೇ ಸ್ವಾತಂತ್ರ್ಯೋತ್ಸವದ ರಾಷ್ಟ್ರ ಧ್ವಜಾರೋಹಣ ನೇರವೆರಿಸಿ, ಸಂದೇಶ ನೀಡಿ, ಮಾತನಾಡಿದರು.

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಎಲ್ಲಾ ಮಹನೀಯರ ನೆನಪಿನಲ್ಲಿ ಮತ್ತು ಅವರುಗಳಿಗೆ ಗೌರವ ಸಲ್ಲಿಸುವುದಕ್ಕಾಗಿ ಈ ದಿನವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಏಕತೆ, ಸತ್ಯಾಗ್ರಹ, ಅಹಿಂಸೆ ಹಾಗೂ ಶಾಂತಿ ಮಾರ್ಗವನ್ನು ಅನುಸರಿಸಿ ಸ್ವಾತಂತ್ರ್ಯ ಗಳಿಸಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ ಎಂದು ಅವರು ಹೇಳಿದರು.

ಭಾರತದ ಸ್ವಾತಂತ್ರ್ಯದ ಚಳುವಳಿಯನ್ನು ರೂಪಿಸಿದ ನಮ್ಮ ಹಿರಿಯ ಹೋರಾಟಗಾರರಾದ ರಾಜಾರಾಮ್ ಮೋಹನ್ ರಾಯ್, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ದಾದಾಬಾಯಿ ನವರೋಜಿ, ಬಾಲ ಗಂಗಾಧರ ತಿಲಕ್, ಗೋಖಲೆ, ಲಾಲಾ ಲಜಪತರಾಯ್, ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ನೇತಾಜಿ ಸುಭಾಷ್‌ಚಂದ್ರ ಬೋಸ್, ಭಗತ್‌ಸಿಂಗ್, ಮೌಲಾನಾ ಅಬುಲ್ ಕಲಾಂ ಆಜಾದ್ ಮೊದಲಾದ ಮಹನೀಯರುಗಳನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ಧಾರವಾಡ ಜಿಲ್ಲೆಯ ಮೈಲಾರ ಮಹದೇವಪ್ಪ, ಆರ್.ಆರ್.ದಿವಾಕರ್, ಉಮಾಬಾಯಿ ಕುಂದಾಪುರ, ಎನ್. ಎಸ್. ಹರಡೀಕರ್, ಕೆ.ಎಫ್.ಪಾಟೀಲ, ಗೋವಿಂದಾಚಾರ್ಯ ಅಗ್ನಿಹೋತ್ರಿ, ನರಸಿಂಹ ದಾಬಡೆ, ಡೆಪ್ಯೂಟಿ ಚನ್ನಬಸಪ್ಪ, ಸರ್. ಸಿದ್ದಪ್ಪ ಕಂಬಳಿ, ಅರಟಾಳ ರುದ್ರಗೌಡರು ಸೇರಿದಂತೆ ಮೊದಲಾದ ನೇತಾರರು ಸ್ವಾತಂತ್ರ್ಯ ಹೋರಾಟದಲ್ಲಿ ಕೈ ಜೋಡಿಸಿದ್ದರು.

ನಮ್ಮ ದೇಶದ ಹೆಮ್ಮೆಯ ಸಂಕೇತವಾಗಿರುವ ರಾಷ್ಟ್ರಧ್ವಜವನ್ನು ಧಾರವಾಡದ ಗರಗ ಹಾಗೂ ಹುಬ್ಬಳ್ಳಿಯ ಬೆಂಗೇರಿಯಲ್ಲಿ ಸಿದ್ಧಪಡಿಸಿ, ಇಡೀ ದೇಶಕ್ಕೆ ಒದಗಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ ಎಂದು ಸಚಿವ ಸಂತೋಷ ಲಾಡ್ ಹೆಮ್ಮೆ ವ್ಯಕ್ತಪಡಿಸಿದರು.

ಈ ಸ್ವಾತಂತ್ರ್ಯ ದಿನದಂದು ಮಹಾತ್ಮ ಗಾಂಧೀ-ಜಿಯವರ "ಮನುಷ್ಯರಾಗಿ ನಮ್ಮ ದೊಡ್ಡ ಸಾಮರ್ಥ-ರ್ಯವೆಂದರೆ, ಜಗತ್ತನ್ನು ಬದಲಾಯಿಸುವುದು ಅಲ್ಲ, ಬದಲಾಗಿ ನಮ್ಮನ್ನು ನಾವು ಬದಲಾಯಿಸಿಕೊಳ್ಳುವುದು" ಎಂಬ ಮಾತುಗಳನ್ನು ಪಾಲಿಸೋಣ. ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್‌ರವರು ರಚಿಸಿರುವ ಸಂವಿಧಾನದ ಪೂರ್ವ ಪೀಠಿಕೆಯು ನಮ್ಮ ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಒಳಗೊಂಡಿದೆ. ಉತ್ತಮ ನಾಗರಿಕರಾಗಲು, ಕಷ್ಟಪಟ್ಟು ಕೆಲಸ ಮಾಡಲು ಮತ್ತು ನಮ್ಮ ದೇಶದ ಪ್ರಗತಿಗೆ ಕೊಡುಗೆ ನೀಡಲು ನಾವು ಪಣ ತೊಡೋಣ ಹಾಗೂ ಬಲಿಷ್ಠ ಭಾರತದ ಕನಸನ್ನು ಜೀವಂತವಾಗಿರಿಸೋಣ ಎಂದು ಸಚಿವರು ಸಂಕಲ್ಪಿಸಿದರು.

ರಾಜ್ಯ ಸರಕಾರವು ನುಡಿದಂತೆ ನಡೆದಿದ್ದು, ಜನಪರ ಯೋಜನೆಗಳಾದ ಶಕ್ತಿ ಯೋಜನೆ ,ಗೃಹ ಲಕ್ಷ್ಮಿ ಯೋಜನೆ, ಗೃಹ ಜ್ಯೋತಿ ಯೋಜನೆ, ಅನ್ನಭಾಗ್ಯ ಯೋಜನೆ ಹಾಗೂ ಯುವನಿಧಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.

ಶಕ್ತಿ ಯೋಜನೆಯಡಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಜುಲೈವರೆಗೆ 2633.85 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ. ರೂ.564 ಕೋಟಿ ಮೊತ್ತದ ಸೇವೆಯನ್ನು ಪಡೆದಿರುತ್ತಾರೆ.

ಗೃಹಲಕ್ಷ್ಮಿ ಯೋಜನೆಯಡಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಒಟ್ಟು 3,77,367 ಮಹಿಳೆಯ-ರಿಗೆ ರೂ.1,499 ಕೋಟಿಗಳ ಅನುದಾನವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ.

ಗೃಹಜ್ಯೋತಿ ಯೋಜನೆ ಅಡಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಒಟ್ಟು 5,04,142 ಕುಟುಂಬಗಳಿಗೆ ರೂ.526 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಅನ್ನಭಾಗ್ಯ ಯೋಜನೆಯಡಿ ನಮ್ಮ ಜಿಲ್ಲೆಯಲ್ಲಿ 3,84,630 ಬಿ.ಪಿ.ಎಲ್. ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಒದಗಿಸಲಾಗಿದೆ ಹಾಗೂ ಹೆಚ್ಚುವ-ರಿಯಾಗಿ ಬಿ.ಪಿ.ಎಲ್. ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ರೂ.170/- ಗಳಂತೆ ರೂ. 358 ಕೋಟಿಗಳನ್ನು ವಿತರಿಸಲಾಗಿದೆ.

ಯುವನಿಧಿ ಯೋಜನೆಗೆ ಧಾರವಾಡ ಜಿಲ್ಲೆಯಲ್ಲಿ 6951 ಫಲಾನುಭವಿಗಳಿಗೆ ನೇರ ನಗದು (ಡಿಬಿಟಿ) ಹಣವನ್ನು ವರ್ಗಾವಣೆ ಮಾಡಲಾಗಿದೆ.

2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 2.81 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಇದ್ದು, ಈ ವರೆಗೆ 2.91 ಲಕ್ಷ ಹೆಕ್ಟೇರ್‌ಗಳಷ್ಟು ಬಿತ್ತನೆಯಾಗಿದೆ.

ಮುಂಗಾರು ಹಂಗಾಮಿನಲ್ಲಿ ಒಟ್ಟು 13,143 ಕ್ವಿಂಟಾಲ್ ವಿವಿಧ ಬಿತ್ತನೆ ಬೀಜಗಳನ್ನು ವಿತ-ರಿಸಲಾಗಿದೆ ಹಾಗೂ 56,660 ಮೆಟ್ರಿಕ್ ಟನ್‌ಗಳಷ್ಟು ರಸಗೊಬ್ಬರವನ್ನು ವಿತರಿಸಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ವಿಪತ್ತು ನಿರ್ವಹಣೆಗೆ ರೂ.23.08 ಕೋಟಿಗಳ ಅನುದಾನ ಲಭ್ಯವಿರುತ್ತದೆ ಎಂದು ಚಿವ ಸಂತೋಷ ಲಾಡ್ ತಿಳಿಸಿದರು.

ಜನಪ್ರಿಯ ಮುಖ್ಯಮಂತ್ರಿ ಸಿದ್ಧರಾಮಯ್ಯ



ಅವರು ತಮ್ಮ ಸರ್ಕಾರವು ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ತಾವು ಮಂಡಿಸಿರುವ ಈ ಸಾಲಿನ ಬಜೆಟ್ ಮುಖಾಂತರ ನಾಡಿನ ಜನತೆಗೆ ತಿಳಿಸಿ, ಅವರ ಪ್ರೀತಿ ಗಳಿಸಿರುತ್ತಾರೆ.

ರೈತರು, ಕಾರ್ಮಿಕರು, ಹಿಂದುಳಿದ ವರ್ಗದವರು ಸೇರಿದಂತೆ ಎಲ್ಲಾ ವರ್ಗದ ಬಡ ಜನತೆಗೆ ಭದ್ರತೆಯನ್ನು ಒದಗಿಸಲು ಸರ್ಕಾರ ಸದಾ ಬದ್ಧವಾಗಿದೆ.

ಒಟ್ಟಾರೆ ನಮ್ಮ ಸರ್ಕಾರದ ಮೂಲ ಉದ್ದೇಶ ಜನಪರ ಆಡಳಿತವನ್ನು ಜನಸಾಮಾನ್ಯರಿಗೆ ತಲುಪಿಸುವುದಾಗಿದೆ. ಸರ್ಕಾರ ರೂಪಿಸುವ ಎಲ್ಲಾ ಯೋಜನೆಗಳನ್ನು ಆ ಜಾರಿಗೆ ತರಲು ಎಲ್ಲರ ಸಹಕಾರ ಮತ್ತು ಬದ್ಧತೆ ಅಗತ್ಯವಾಗಿದೆ. ಎಲ್ಲರ ಒಳಿತಿಗಾಗಿ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

ವಿಶೇಷವಾಗಿ ಈ ಒಂದು ಕಾರ್ಯಕ್ರಮದಲ್ಲಿ ಬಹಳಷ್ಟು ಯುವಕ ಜನರು ಸೇರಿದ್ದೀರಿ ಈ ದೇಶದ ಜವಾಬ್ದಾರಿ ನಿಮ್ಮ ಹೆಗಲ ಮೇಲೆ ಇದೆ. ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಎಲ್ಲರೂ ಅಳವಡಿಸಿಕೊಂಡು ಈ ದೇಶವನ್ನು ಬಲಿಷ್ಠವನ್ನಾಗಿ ಮಾಡಿ ಮುಂದೆ ನಡೆಸಿಕೊಂಡು ಹೋಗೋಣ ಎಂದು ಅವರು ಹೇಳಿದರು.

ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷ ಸಂಗಮೇಶ ಅಪ್ಪಾಸಿ ಬಬಲೇಶ್ವರ, ಜಿಲ್ಲಾಧಿಕಾರಿ ದಿವ್ಯ ಪ್ರಭು, ಹುಬ್ಬಳ್ಳಿ ಧಾರವಾಡ ಮಹಾನಗರ ಪೊಲೀಸ್ ಆಯುಕ್ತ ಎನ್.ಶಶಿಕುಮಾರ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಾಟೀಲ ಭುವನೇಶ ದೇವಿದಾಸ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ ಆರ್ಯ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಗರಿಮಾ ಪವಾರ, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಗಳು, ಜನಪ್ರತಿನಿದಿಗಳು, ಮುಖಂಡರು ವೇದಿಕೆಯಲ್ಲಿದರು.

ಕಾರ್ಯಕ್ರಮದಲ್ಲಿ ವಿವಿಧ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು, ವಿವಿಧ ಇಲಾಖೆಗಳ ಅಧಿಕಾರಿ ಸಿಬ್ಬಂಧಿಗಳು, ಸಾರ್ವಜನಿಕರು ಉಪಸ್ಥತರಿದ್ದರು.

ಪಥ ಸಂಚಲನ : ಆರ್ ಎನ್ ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತವು ಆಯೋಜಿಸಿದ್ದ 79ನೇ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಮತ್ತು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಆಕರ್ಷಕವಾದ ಪಥ ಸಂಚಲನವನ್ನು ಪ್ರಸ್ತುತ ಪಡಿಸಿದರು.

ಆರ್.ಎಸ್.ಐ. ವಾಸು ರಕ್ಷೇದ ನಾಯಕತ್ವದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಪಿಎಸ್ಐ ಅಭಿಜೀತ್ ನಾಯಕತ್ವದಲ್ಲಿ ನಾಗರೀಕ ಪೊಲೀಸ್ ತುಕಡಿ, ಪಿ.ಎಸ್.ಐ ಸ್ವಾತಿ ಮುರಾರಿ ನಾಯಕತ್ವದಲ್ಲಿ ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರ ಮಹಿಳಾ ತಂಡ, ಭೀಮಪ್ಪ ಬೆನ್ನಪ್ಪನವರ ನಾಯಕತ್ವದಲ್ಲಿ ಗೃಹ ರಕ್ಷಕ ದಳ, ವಿಠೋಬಾ ಢವಳೆ ನಾಯಕತ್ವದಲ್ಲಿ ಅಗ್ನಿ ಶಾಮಕ ಇಲಾಖೆ, ಲಕ್ಷ್ಮಿ ಕಾಂಬಳೆ ನಾಯಕತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಬಾಲಕಿಯರ ಕೇಸರಿ ತಂಡ, ಕವನಾ ಭಜಂತ್ರಿ ನಾಯಕತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಬಾಲಕಿಯರ ಬಿಳಿ ತಂಡ, ಎಸ್. ನಾಗರತ್ನ ನಾಯಕತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಬಾಲಕಿಯರ ಹಸಿರು ತಂಡ, ವಿಷ್ಣು ಚವ್ಹಾಣ ನಾಯಕತ್ವದಲ್ಲಿ ಅರಣ್ಯ ಇಲಾಖೆ, ಅಜಯ ಪಟ್ಟೋಜಿ ನಾಯಕತ್ವದಲ್ಲಿ ಸೀನಿಯರ್ ಎನ್.ಸಿ.ಸಿ. 24 ಬಟಾಲಿಯನ್, ನಾನಪ್ಪ ಲಮಾಣಿ ನಾಯಕತ್ವದಲ್ಲಿ ಎನ್.ಡಬ್ಲ್ಯೂ. ಕೆ.ಎಸ್.ಆರ್.ಟಿ.ಸಿ. ತುಕಡಿ, ಹರೀಶ ರಾಥೋಡ್ ನಾಯಕತ್ವದಲ್ಲಿ ಶ್ರೀ ಎನ್.ಎ.ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯ ತಂಡ, ಚೈತ್ರಾ ದೇಗಾವಿ ನಾಯಕತ್ವದಲ್ಲಿ ಸೀನಿಯರ್ ಗರ್ಲ್ಸ ಎನ್.ಸಿ.ಸಿ. ತಂಡ, ಕಿಶೋರ ಹುರಳಿಕುಪ್ಪಿ ನಾಯಕತ್ವದಲ್ಲಿ ಜೂನಿಯರ್ ಎನ್.ಸಿ.ಸಿ. 24 ಬಟಾಲಿಯನ್ ತಂಡ, ಸಹನಾ ಬಟಕುರ್ಕಿ ನಾಯಕತ್ವದಲ್ಲಿ ಜೂನಿಯರ್ ಗರ್ಲ್ಸ ಎನ್.ಸಿ.ಸಿ. ತಂಡ, ಪ್ರಣವಿ ಕನ್ನೂರ ನಾಯಕತ್ವದಲ್ಲಿ ಪ್ರಸೆಂಟೇಷನ್ ಸ್ಕೂಲ್ ಗೈಡ್ಸ್ ತುಕಡಿ, ಮಲ್ಲಿಕಾರ್ಜುನ ಬಂಕಾಪೂರ ನಾಯಕತ್ವದಲ್ಲಿ ಸೆಂಟ್ ಜೋಸೆಪ್ಸ್ ಹೈಸ್ಕೂಲ್ ತಂಡ, ವೀರೇಶ ಅಂಗಡಿ ನಾಯಕತ್ವದಲ್ಲಿ ಕರ್ನಾಟಕ ಹೈಸ್ಕೂಲ್ ತಂಡ, ಗೌಥಮಿ ಭಟ್ ನಾಯಕತ್ವದಲ್ಲಿ ಕೆ.ಎನ್.ಕೆ. ಬಾಲಕೀಯರ ಪ್ರೌಢ ಶಾಲೆಯ ತಂಡ ಭಾಗವಹಿಸಿದ್ದವು.

ಪಥಸಂಚಲನಕ್ಕೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಎ.ಆರ್.ಎಸ್.ಐ ವೈ.ಎಫ್.ಭಜಂತ್ರಿ ಮತ್ತು ಸ್ಟಿಕ್ ಮೇಜರ್ ಸಾಗರ ಬಸರಕೋಡಿ ಅವರ. ನೇತೃತ್ವದಲ್ಲಿ ಧಾರವಾಡ ಜಿಲ್ಲಾ ಪೊಲೀಸ್ ಬ್ಯಾಂಡ್ ಹಾಗೂ ಎನ್.ಡಬ್ಲ್ಯೂ ಕೆ.ಎಸ್.ಆರ್.ಟಿ.ಸಿ. ತಂಡಗಳು ವಾಧ್ಯ ವೃಂದ ನುಡಿಸಿದವು.

ಪಥಸಂಚಲನದಲ್ಲಿ ಪ್ರಥಮ ಸ್ಥಾನವನ್ನು ಸೀನಿಯರ್ ಎನ್.ಸಿ.ಸಿ. 24 ಬಟಾಲಿಯನ್ ಪ್ಲಟೂನ್ ಕಮಾಂಡರ್ ಅಜಯ ಪಟ್ಟೋಜಿ, ದ್ವಿತೀಯ ಸ್ಥಾನವನ್ನು ಶ್ರೀ.ಎನ್.ಎ.ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ ಪ್ಲಟೂನ್ ಕಮಾಂಡರ್ ಹರೀಶ ರಾಥೋಡ್ ಹಾಗೂ ತೃತೀಯ ಸ್ನಾನವನ್ನು ಸಮಾಜ ಕಲ್ಯಾಣ ಇಲಾಖೆಯ ಬಾಲಕಿಯರ ಕೇಸರಿ ತಂಡದ ಪ್ಲಟೂನ್ ಕಮಾಂಡರ್ ಲಕ್ಷ್ಮಿ ಕಾಂಬಳೆ ಅವರು ಪಡೆದುಕೊಂಡರು.

ಸಾಧಕರಿಗೆ ಸನ್ಮಾನ: ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಧಾರವಾಡ ಜಿಲ್ಲಾಡಳಿತದಿಂದ ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹಾಗೂ ಜಿಲ್ಲಾಧಿಕಾರಿ ದಿವ್ಯಪ್ರಭು ಅವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಹಾಗೂ ಹಿರಿಯರನ್ನು ಗೌರವಿಸಿ, ಸನ್ಮಾನಿಸಿದರು.

ಕ್ರೀಡಾ ವಿಭಾಗದಲ್ಲಿ ಹುಬ್ಬಳ್ಳಿ ಗ್ರಾಮೀಣ ಸಿಪಿಐ ಮುರುಗೇಶ ಚನ್ನಣ್ಣವರ, ಅಮನ್ ಶಾನಭಾಗ, ಕುಮಾರಿ ಭೂಮಿಕಾ ಉದಯ ಬನ್ನಿಕೊಪ್ಪ ಮತ್ತು ಸಮಾಜ ಸೇವಾ ವಿಭಾಗದಲ್ಲಿ ಕುಂದಗೋಳ ತಾಲೂಕಿನ ಬಿಬಿ ಫಾತೀಮಾ ಮಹಿಳಾ ಸಂಘ, ರಾಜೇಶ್ವರಿ ಮಂಜುನಾಥ ಪವಾಡಿ, ಶ್ರೀಧರ ಲಕ್ಷ್ಮಣ ಸಾಹುಕಾರ, ಮೂರ್ತಿ ಕಲಾಕ್ಷೇತ್ರದಲ್ಲಿ ಮಂಜುನಾಥ ಹಿರೇಮಠ, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಸಂತೋಷ ಮಠಪತಿ, ಡಾ. ಶಿವಾನಂದ ಹೊರಕೇರಿ, ಪರಿಸರ ಛಾಯಾಚಿತ್ರಗಾರಿಕೆಗಾಗಿ ಪ್ರಲ್ಹಾದಗೌಡ ಬಿ. ಗೊಲ್ಲಗೌಡರ, ನಾಣ್ಯ ಸಂಗ್ರಹ ಸಾಧನೆ ಕ್ಷೇತ್ರದಲ್ಲಿ ಸುನಿಲಕುಮಾರ ಕಮ್ಮಾರ, ಸರ್ಕಾರಿ ಸೇವಾ ಕ್ಷೇತ್ರದಲ್ಲಿ ಚಂದ್ರು ಕೊಲಕಾರ, ಶಿಕ್ಷಣ ಕ್ಷೇತ್ರದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಕೆ.ಪಿ.ಸುರೇಶ ಅವರನ್ನು ಮತ್ತು ಮಾಧ್ಯಮ ಕ್ಷೇತ್ರದಲ್ಲಿ ಸುದೀರ್ಘ ಸೇವೆಸಲ್ಲಿಸಿದ ಮೋಹನ ಹೆಗಡೆ, ಗುರುರಾಜ ಜಮಖಂಡಿ ಹಾಗೂ ಹಿರಿಯ ಪತ್ರಕರ್ತರಾದ ಮಂಜುನಾಥ ಅಂಗಡಿ, ನಿಜಗುಣಿ ದಿಂಡಲಕೊಪ್ಪ, ರವೀಶ ಪವಾರ, ಹಿರಿಯ ಛಾಯಾಗ್ರಾಹಕರಾದ ಬಿ.ಎಂ.ಕೇದಾರನಾಥ ಸ್ವಾಮಿ, ಬಸವರಾಜ ಅಳಗವಾಡಿ, ಹಿರಿಯ ಪತ್ರಕರ್ತರಾದ ಪರಮೇಶ್ವರ ಅಂಗಡಿ, ಪ್ರಶಾಂತ ದಿನ್ನಿ, ಮಂಜುನಾಥ ಯಡಳ್ಳಿ, ವಿಠ್ಠಲ ಕರಡಿಗುಡ್ಡ, ಹಿರಿಯ ವಿಡಿಯೋಗ್ರಾಫರಾದ ಗುರುನಾಥ ಕಟ್ಟಿಮನಿ ಅವರನ್ನು ಗೌರವಿಸಿ, ಸನ್ಮಾನಿಸಲಾಯಿತು.

ಪ್ರೇಕ್ಷಕರ ಮನ ಗೆದ್ದ ಸಾಂಸ್ಕೃತಿ-ಕ ಕಾರ್ಯಕ್ರಮಗಳು: ಜಿಲ್ಲಾಡಳಿತವು 79 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಜಿಲ್ಲಾ ಕ್ರೀಡಾಂಗದಲ್ಲಿ ಇಂದು ಆಯೋಜಿಸಿದ್ದ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಮನ ಗೆದ್ದವು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಕ್ಯಾಟೋ ಬ್ಯಾಂಡ ತಂಡದವರಿಂದ ಜರುಗಿದ ಸಂಗೀತ ಕಾರ್ಯಕ್ರಮವು ಆಕರ್ಷಕವಾಗಿತ್ತು. ಜಿಲ್ಲೆಯ ಸಮಾಜಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿನಿಲಯಗಳ ವಿದ್ಯಾರ್ಥಿನಿಯರಿಂದ ಸಮೂಹನೃತ್ಯವನ್ನು ಪ್ರದರ್ಶಿಸಿದರು. ಡಾನ್ಸ್ ಕರ್ನಾಟಕ ಡಾನ್ಸ ತಂಡದಿಂದ ಸಮೂಹ ನೃತ್ಯ, ಹೈಸ್ಕೂಲು ವಿದ್ಯಾರ್ಥಿಗಳಿಂದ ಜರುಗಿದ ದೇಶಭಕ್ತಿಗೀತೆ, ಸಮೂಹ ನೃತ್ಯ, ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿ-ಕ ಕಾರ್ಯಕ್ರಮ, ಕುಂದಗೋಳ ತಾಲೂಕಿನ ವಿದ್ಯಾರ್ಥಿಗಳಿಂದ ಮಲ್ಲಕಂಬ ಪ್ರದರ್ಶನ ಜರುಗಿ-ತು. ಮತ್ತು ಖ್ಯಾತ ಕೊರಿಯೋಗ್ರಾಫರ್ ರುದ್ರಾ ಮಾಸ್ತರ ತಂಡದವರಿಂದ ಆಕರ್ಷಕ ಸಮೂಹ ನೃತ್ಯ ಜರುಗಿತು.

ಕೈಮಗ್ಗ ಕಸೂತಿ ವಸ್ತು ಪ್ರದರ್ಶನಕ್ಕೆ ಚಾಲನೆ: ಜಿಲ್ಲಾಡಳಿತ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಜಿಲ್ಲಾ ಕ್ರೀಡಾಂಗಣ ಆವರಣದಲ್ಲಿ ಆಯೋಜಿಸಿರುವ ಎರಡು ದಿನಗಳ ವಸ್ತು ಪ್ರದರ್ಶನ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್ ಲಾಡ್ ಅವರು ಉದ್ಘಾಟಿಸಿ, ಚಾಲನೆ ನೀಡಿದರು.

ಈಸಂದರ್ಭದಲ್ಲಿ ಜಿಲ್ಲಾಧಿಕಾರಿ ದಿವ್ಯ ಪ್ರಭು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಗರಿಮಾ ಪವಾರ ಸೇರಿದಂತೆ ಇತರರು ಇದ್ದರು.

### 79ನೇ ಸ್ವಾಂತ್ರೋತ್ಸವದ ಸಂಭ್ರಮ : ಶಾಲಾ ಮಕ್ಕಳಿಂದ ಸಾಂಸ್ಕೃತಿ ಕಾರ್ಯಕ್ರಮ

# ಬಂಡಾಯದ ಕಹಳೆ ಮೊಳಗಿಸಿದ ಹಲಗಲಿ ಬೇಡರು : ತಿಮ್ಮಾಪೂರ



ಬಾಗಲಕೋಟೆ: : ಸ್ವಾತಂತ್ರ್ಯ ಹೋರಾಟದಲ್ಲಿ ಮುಧೋಳನ ಹಲಗಲಿಯ ಬೇಡರು ಬ್ರಿಟಿಷರ ವಿರುದ್ದ ಬಂಡಾಯದ ಕಹಳೆಯನ್ನು ಮೊಳಗಿಸಿ, ನೂರಾರು ಜನ ಆಹೂತಿಯಾಗಿರುವುದು ಇಂದಿಗೂ ರಾಷ್ಟ್ರ, ರಾಜ್ಯ ಹಾಗೂ ಬಾಗಲಕೋಟೆಯ ಇತಿಹಾಸದಲ್ಲಿ ನೆನಪಿಸಿಕೊಳ್ಳುವ ಸಂಗತಿಯಾಗಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಜರುಗಿದ 79ನೇ ಸ್ವಾಂತ್ರೋತ್ಸವದ ಧ್ವಜಾರೋಹಣ ನೆರವೇರಿಸಿ, ಧ್ವಜಾವಂದನೆ ಸ್ವೀಕರಿಸಿ ಮಾತನಾಡಿದ ಅವರು ಜಡಗಣ್ಣ ಹಾಗೂ ಬಾಳಣ್ಣರ ಮುಂದಾಳತ್ವದಲ್ಲಿ 500 ಜನ ಸಂಘರ್ಷಕ್ಕೆ ಇಳಿದಿದ್ದರು. ಬ್ರಿಟೀಷ ಅಧಿಕಾರಿ ಕರ್ನಲ್ ಹಲಗಲಿ ಗ್ರಾಮಕ್ಕೆ ಬೆಂಕಿ ಹಚ್ಚಿ ಸುಟ್ಟ ಹಿನ್ನಲೆಯಲ್ಲಿ ನೂರಾರು ಜನ ಆಹೂತಿಯಾದರು. ಅನೇಕರನ್ನು ಮುಧೋಳ ಸಂತೆಯಲ್ಲಿ ಗಲ್ಲಿಗೇರಿಸಲಾಗಿತ್ತು. ಜಮಖಂಡಿಯ ಬಂಡಾಯ, ಬದಾಮಿ ಬಂಡಾಯಗಳು ಸಹ ಸ್ವತಂತ್ರ್ಯ ಸಂಗ್ರಾಮದ ಹೋರಾಟದ ದಾಖಲೆಗಳಾಗಿವೆ ಎಂದು ತಿಳಿಸಿದರು.

ಶಕ್ತಿ ಯೋಜನೆ ಯಶಸ್ಸು ಕಂಡಿದ್ದು, 500 ಕೋಟಿ ಪ್ರಯಾಣಿಕರ ಸಂಭ್ರಮಾಚರಣೆಯನ್ನು ಜಿಲ್ಲೆಯಾದ್ಯಂತ ಆಚರಿಸಲಾಗಿದೆ. ಜಿಲ್ಲೆಯಲ್ಲಿ ಪ್ರತಿದಿನ 2 ಲಕ್ಷದಿಂದ 3 ಲಕ್ಷದವರೆಗೆ ಸರಾಸರಿ ಮಹಿಳೆಯರಿಗೆ ಅನುಕೂಲವಾಗುತ್ತಿದೆ. ಅನ್ನಭಾಗ್ಯ ಯೋಜನೆಯಡಿ ಫೆಬ್ರವರಿ ಮಾಹೆಯಿಂದ ಜಾರಿಗೆ ಬರುವಂತೆ ನೇರ ನಗದು ವರ್ಗಾವಣೆ ಬದಲಾಗಿ ಒಟ್ಟು 10 ಕೆ.ಜಿ ಆಹಾರಧಾನ್ಯವನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಗೃಹಜ್ಯೋತಿ ಯೋಜನೆಯಡಿ 4.24 ಲಕ್ಷ ಜನ ಪ್ರಯೋಜನ ಪಡೆದರೆ, ಗೃಹ ಜ್ಯೋತಿ ಯೋಜನೆಯಡಿ 4.24 ಲಕ್ಷ, ಯುವನಿಧಿ ಯೋಜನೆಯಿಂದ 13,345 ಜನ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು. ಕಂದಾಯ ಇಲಾಖೆಯಿಂದ ಜಿಲ್ಲೆಯ 10,392 ಫಲಾನುಭವಿಗಳು ವಿವಿಧ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಸ್ವಚ್ಚಸರ್ವೆಕ್ಷಣಾ ಸಮೀಕ್ಷೆ-2024ರ ವರದಿಯಲ್ಲಿ ರಾಜ್ಯದ ನಗರಸಭೆಗಳಲ್ಲಿ ಬಾಗಲಕೋಟೆ ನಗರಸಭೆ 2ನೇ ಸ್ಥಾನ ಪಡೆದುಕೊಂಡಿದೆ. ಜಿಲ್ಲಾ ಆಸ್ಪತ್ರೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಕಿಮೋಥೆರಪಿ ಚಿಕಿತ್ಸೆಯನ್ನು ಪ್ರಾರಂಭಿಸಲಾಗಿದೆ. ಮುಧೋಳ ನಗರದಲ್ಲಿರುವ ದತ್ತ ಕೆರೆ ಅಭಿವೃದ್ದಿಪಡಿಸಲಾಗುತ್ತಿದೆ. ನವನಗರದ ಸೆಕ್ಟರ ನಂ.7ರಲ್ಲಿ 5 ಕೋಟಿ ರೂ.ಗಳ ವೆಚ್ಚದಲ್ಲಿ ಮೆಟ್ರಿಕ್ ನಂತರದ ಇಂಜಿನೀಯರಿಂಗ್ ಮತ್ತು ಮೆಡಿಕಲ್ ಬಾಲಕಿಯರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಮುಚಖಂಡಿ ಕೆರೆ ಸುತ್ತ ಮತ್ತಲಿನ ಪ್ರದೇಶದಲ್ಲಿ 3 ಸಾವಿರ ಎತ್ತರದ ಸಸಿಗಳನ್ನು ನೆಟ್ಟು ನೆಡುತೋಪು ಬೆಳೆಸುವ ಕಾರ್ಯ ಪ್ರಗತಿಯಲ್ಲಿದೆ. ಮಹಿಳಾ ಸ್ವಸಹಾಯ ಸಂಘಗಳಿಂದ ಎನ್.ಆರ್.ಎಲ್.ಎಂ ಯೋಜನೆಯಡಿ ಬಾಗಲಕೋಟೆ, ಬೀಳಗಿಯ ಹಾಗೂ ಇಲಕಲ್ಲ ತಾಲೂಕಿನಲ್ಲಿ ಸಂಜೀವಿನಿ ಸೂಪರ ಮಾರ್ಕೇಟ್‌ಗಳನ್ನು ತೆರೆಯಲಾಗುತ್ತಿದೆ. ವನಧನ ವಿಕಾಸ ಯೋಜನೆಯಡಿ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸೂಕ್ತ ತರಬೇತಿ ನೀಡಿ, ಬಾದಾಮಿಯ ಆಡಗಲ್‌ನಲ್ಲಿ ಶೇಂಗಾ ಚಿಕ್ಕಿ ತಯಾರಿಕೆ, ಮುಧೋಳದ ಹಲಗಲಿಯಲ್ಲಿ ಬಿಸ್ಕತ್ ತಯಾರಿಕೆಯ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು.

ಮನೆ ಮನೆ ಗಂಗೆ ಎಂಬ ಯೋಜನೆಯ ಮೂಲಕ 3.33 ಲಕ್ಷ ಮನೆಗಳಿಗೆ ಪ್ರತಿ ದಿನ ತಲಾವಾರು 55 ಲೀಟರ್ ಶುದ್ದ ನೀರು ಪೂರೈಸುವ ಗುರಿಯನ್ನು ಹೊಂದಲಾಗಿದ್ದು, ಇಲ್ಲಿವರೆಗೆ 2.97 ಲಕ್ಷ ಮನೆಗಳಿಗೆ ನಳಗಳ ಸಂಪರ್ಕ ಒದಗಸಲಾಗಿದೆ. ಮುಧೋಳದಲ್ಲಿ ರನ್ನ ಉತ್ಸವ, ಕೂಡಲಸಂಗಮದಲ್ಲಿ ಅನುಭವ ಮಂಟಪ ಬಸವಾದಿ ಶರಣ ವೈಭವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಪ್ರವಾಸೋದ್ಯಮ ಉತ್ತೇಜನೆಗಾಗಿ ರೂ.166.22 ಕೋಟಿ ಅಂದಾಜು ಮೊತ್ತದಲ್ಲಿ ಬಾದಾಮಿ, ಐಹೊಳೆ, ಪಟ್ಟದಕಲ್ಲು ಸ್ಥಳಗಳನ್ನು ಒಳಗೊಂಡಿರುವ ಉತ್ತರ ಕರ್ನಾಟಕ ಪ್ರವಾಸಿ ವೃತ್ತವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ದಿಪಡಿಸಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಗಲಕೋಟೆ ಶಾಸಕ ಹಾಗೂ ಬಿಟಿಡಿಎ ಅಧ್ಯಕ್ಷ ಎಚ್.ವಾಯ್. ಮೇಟಿ ವಹಿಸಿದ್ದರು. ವೇದಿಕೆಯ ಮೇಲೆ ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕನ್ನವರ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಶಶಿಧರ ಕುರೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸ್ವಾತಂತ್ರ್ಯೋತ್ಸವ ದಿನಾಚರಣೆ : ಸಾಧಕರಿಗೆ ಸನ್ಮಾನ, ಗಮನ ಸೆಳೆದ ಪಥ ಸಂಚಲನ



ಗದಗ : ಗದುಗಿನ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ಸ್ವಾತಂತ್ರ್ಯೋತ್ಸವ ದಿನಾಚರಣೆಯ ಅಂಗವಾಗಿ ಸಾರ್ವಜನಿಕ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ವಿವಿಧ ದಳಗಳ ವೀಕ್ಷಣೆ ಮಾಡಿದರು.

ಸ್ವಾತಂತ್ರ್ಯೋತ್ಸವ ದಿನಾಚರಣೆ -2025 ಯ ಅಂಗವಾಗಿ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಗುರುತಿಸಿ ಜಿಲ್ಲಾಡಳಿತದಿಂದ ಸನ್ಮಾನಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಸೇರಿದಂತೆ ಇತರೆ ಗಣ್ಯರು ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡರು.

ಜಿಲ್ಲಾ ಪೊಲೀಸ ಅಧೀಕ್ಷಕರಾದ ರೋಹನ ಜಗದೀಶ್ ಹಾಗೂ ಡಿಎಸ್‌ಪಿ ವಿದ್ಯಾನಂದ ವಿ ನಾಯಕ ಇವರ ಮಾರ್ಗದರ್ಶನದಲ್ಲಿ ಜರುಗಿದ ಆಕರ್ಷಕ ಪಥಸಂಚಲನದ ನೇತೃತ್ವವನ್ನು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪರೇಡ ಕಮಾಂಡರ್ ಶಂಕರಗೌಡ ಚೌದ್ರಿ ಇವರು ನೇತೃತ್ವವನ್ನು ವಹಿಸಿದ್ದರು. ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ ಪಡೆಯ ನೇತೃತ್ವವನ್ನು ವಿಜಯಕುಮಾರ್ ಜಿ ವಹಿಸಿದ್ದರು.

ನಾಗರಿಕ ಪೊಲೀಸ ಪಡೆಯ ನೇತೃತ್ವವನ್ನು ಚಾಂದಭಾಷಾ ಪ್ರೊ.ಆರ್.ಎಸ್.ಐ. ಡಿಎಆರ್ ಗದಗ, ಗೃಹ ರಕ್ಷಕ ದಳದ ನೇತೃತ್ವವನ್ನು ಎಂ.ಎನ್.ವಸ್ತ್ರದ, ಅಗ್ನಿಶಾಮಕ ಪಡೆಯ ನೇತೃತ್ವವನ್ನು ಬಂಗಾರಪ್ಪ ವೈ.ಟಿ, ಅಬಕಾರಿ ದಳದ ನೇತೃತ್ವವನ್ನು ಶ್ರೀಮತಿ ವಿಜಯಲಕ್ಷ್ಮೀ ಗಣತಿ, ಅರಣ್ಯ ರಕ್ಷಕ ಪಡೆಯ ನೇತೃತ್ವವನ್ನು ಡೆಪ್ಯೂಟಿ ಆರ್.ಎಫ್.ಓ ಸಚಿನ ಬಿಸನಳ್ಳಿ, ಎನ್.ಸಿ.ಸಿ. ಸಿನೀಯರಸ್ ಬಾಯ್ಸ್ ದಳದ ನೇತೃತ್ವವನ್ನು 38 ಕೆ ಎ ಆರ್ ಬಟಾಲಿಯನ್ ಗದಗನ ಕುಮಾರ ಜ್ಞಾನೇಶ ಗಾಯಕವಾಡ , ಎನ್.ಸಿ.ಸಿ. ಸೀನಿಯರ್ಸ ಗರ್ಲ್ಸ ದ ನೇತೃತ್ವವನ್ನು 38 ಕೆ ಎ ಆರ್ ಬಟಾಲಿಯನ್ ಗದಗನ ಕುಮಾರಿ ಕವುತಾ ಬಾಕಳೆ, ಸೇವಾದಳದ ನೇತೃತ್ವವನ್ನು ಸರ್ಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ , ಎಸ್.ಎಂ. ಕೃಷ್ಣಾ ನಗರದ ಕುಮಾರಿ ಆಯುಶಾ ಸರ್ಕವಾಸ, ಕ್ರೀಡಾ ತಂಡದ ನೇತೃತ್ವವನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಕುಮಾರ ಸಂದೀಪ ನವಲೆಕರ, ಸ್ಕೌಟ್ಸ್ ದ ನೇತೃತ್ವವನ್ನು ಸಿ.ಡಿ.ಓ ಜೈನ್ ಪ್ರಾಥಮಿಕ ಶಾಲೆಯ ಕುಮಾರ್ ಅಭಿಷೆಕ ತೊಂಡಿಹಾಳ, , ಸಾಮಾನ್ಯ ವಿಭಾಗದ ನೇತೃತ್ವವನ್ನು ಸೇಂಟ ಜಾನ್ ಪ್ರೌಢಶಾಲೆಯ ಬೆಟಗೇರಿಯ ಕುಮಾರ ಸೋಮಶೇಖರ್ , ಸ್ಕೌಟ್ಸ್ ವಿಭಾಗದ ನೇತೃತ್ವವನ್ನು ಕೆ.ಎಲ್.ಇ. ಸಿಬಿ ಎಸ್ ಇ ಬಾಲಕರ ಶಾಲೆಯ ಕುಮಾರ ಸಾಯಿಸಮರ್ಥ ಬಡಿಗೇರ , ಗೈಡ್ಸ್ ವಿಭಾಗದ ನೇತೃತ್ವವನ್ನು ಕೆ.ಎಲ್.ಇ. ಸಿಬಿಎಸ್ ಇ ಬಾಲಕಿಯರ ಶಾಲೆಯ ಕುಮಾರಿ ಸಾನ್ವಿ ಚನ್ನಪ್ಪಗೌಡ್ರ , ಸಾಮಾನ್ಯ ವಿಭಾಗದ ನೇತೃತ್ವವನ್ನು ಕೆ.ವಿ.ಎಸ್.ಆರ್. ಪ್ರೌಢಶಾಲೆಯ ಕುಮಾರಿ ಜಾಸ್ಮೀನ್ ಹುಸೇನಬಾಯಿ, ಸೇಂಟ ಜಾನ್ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯ ಕುಮಾರ ಪವನಕುಮಾರ್ , ಬಾಸೆಲ್ ಮಿಶನ ಬಾಲಕರ ಪ್ರೌಢಶಾಲೆಯ ಬೆಟಗೇರಿ ಕುಮಾರ ಉಲ್ಲಾಸ ಹೊನ್ನಾಳಿ, ವಿ.ಡಿ.ಎಸ್.ಟಿ.ಸಿ. ಬಾಲಕಿಯರ ಪ್ರೌಢಶಾಲೆಯ ಕುಮಾರಿ ಸಹನಾ ಸಂಗಮದ.

## ರಬಕವಿಯ ಸಂತೋಷ ಹುಲಗಬಾಳಿ ಡಿಓಎಜೆಗೆ ಆಯ್ಕೆ



ರಬಕವಿ-ಬನಹಟ್ಟಿ: ಅಂತರಾಷ್ಟ್ರೀಯ ಪ್ರತಿಷ್ಠಿತ ಡೈರೆಕ್ಟರಿ ಆಫ್ ಓಪನ್ ಎಕ್ಸೆಸ್ ಜರ್ನಲ್ಸ್ ಸಂಸ್ಥೆಗೆ 138 ದೇಶಗಳ 89 ಭಾಷೆಗಳ ಪರ ಸಲಹಾ ಸಮೀತಿ ನಿರ್ದೇಶಕರಾಗಿ ರಬಕವಿ ಮೂಲದ ಸದ್ಯ ಕೇಂದ್ರೀಯ ವಿಶ್ವವಿದ್ಯಾನಿಲಯ ಹರಿಯಾಣದ ಮುಖ್ಯ ಗ್ರಂಥಪಾಲಕ ಡಾ.ಸಂತೋಷ ಚಂದ್ರಶೇಖರ ಹುಲಗಬಾಳಿ ಆಯ್ಕೆಯಾಗಿದ್ದಾರೆ.

ವಿಶ್ವಮಾನ್ಯತೆಯ ಸಂಸ್ಥೆಯ ನಿರ್ದೇಶಕರಾಗಿ ಆಯ್ಕೆಗೊಂಡ ಡಾ. ಸಂತೋಷ ಹುಲಗಬಾಳಿಗೆ ಹರಿಯಾಣ ವಿ.ವಿ.ಉಪಕುಲಪತಿ ತಂಕೇಶ್ವರ ಕುಮಾರ ಅಭಿನಂದಿಸಿದ್ದಾರೆ. ರಬಕವಿ ಬಣಜಿಗ ಸಮಾಜದ ಅಧ್ಯಕ್ಷ ಗಿರೀಶ ಮುತ್ತೂರ, ಹಿರಿಯರು, ನಿರ್ದೇಶಕ ಮಂಡಳಿ ಹಾಗೂ ನಾಗರಿಕರು ರಬಕವಿ ನಗರದ ಕೀರ್ತಿ ಹೆಚ್ಚಿಸಿದ್ದಕ್ಕೆ ಅಭಿನಂದಿಸಿದ್ದಾರೆ.

## ಆಪ್ತ ಸಮಾಲೋಚಕರ ಹುದ್ದೆಗೆ ಅರ್ಜಿ

ಬಾಗಲಕೋಟೆ, : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಬಾಗಲಕೋಟೆ ಜಿಲ್ಲೆ ಇವರ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಆಸ್ಪತ್ರೆ ಬಾಗಲಕೋಟೆ ರಕ್ತ ಕೇಂದ್ರದಲ್ಲಿ 01 ಆಪ್ತ ಸಮಾಲೋಚಕರ ಹುದ್ದೆ ಹಾಗೂ ಸರ್ಕಾರೇತರ ರಕ್ತಕೇಂದ್ರವಾದ ರಾಮನಗೌಡ ರಕ್ತ ಕೇಂದ್ರ ಮುಧೋಳ ಅನುಮೋದಿತ 01 ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗೆ 2026ರ ಮಾರ್ಚ್ 31ರ ವರೆಗೆ ನೇರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಸಂಬಂಧ ಅನುಭವ ಮತ್ತು ಅರ್ಹತೆಗಳನುಸಾರವಾಗಿ ನಿಗದಿತ ವಯೋಮಾನದಡಿಯಲ್ಲಿ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕ ನಂ: 34, ಜಿಲ್ಲಾ ಆಡಳಿತ ಭವನ ನವನಗರ ಕಛೇರಿಯಿಂದ ಅಗಸ್ಟ್ 26ರೊಳಗಾಗಿ ಪಡೆದು, ಸೂಕ್ತ ದಾಖಲಾತಿಗಳೊಂದಿಗೆ ಅಗಸ್ಟ್ 29ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಆಯ್ಕೆ ಸಮಿತಿ ಸದಸ್ಯ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿಗಳು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಹಲವಾರು ಮಹನೀಯರ ಬಲಿದಾನದ ಫಲವಾಗಿ ಸ್ವಾತಂತ್ರ್ಯ : ಸಚಿವ ಮಂಕಾಳ ವೈದ್ಯ



ಕಾರವಾರ. : ಬ್ರಿಟಿಷರು ದಾಸ್ಯದಿಂದ ದೇಶವನ್ನು ಸ್ವಾತಂತ್ರ್ಯಗೊಳಿಸಲು ಹಲವಾರು ಮಹನೀಯರ ತಮ್ಮ ಬಲಿದಾನ ನೀಡಿದ್ದು, ಅವರ ಬಲಿದಾನದ ಫಲವಾಗಿ ಇಂದು ದೇಶದ ಜನರು ನೆಮ್ಮದಿ ಜೀವನ ಸಾಗಿಸಲು ಸಾಧ್ಯವಾಗಿದೆ ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಹೇಳಿದರು.

ಅವರು ಶುಕ್ರವಾರ ಕಾರವಾರದ ಪೊಲೀಸ್ ಪರೇಡ್ ಮೈದಾನದಲ್ಲಿ ನಡೆದ ಜಿಲ್ಲಾ ಮಟ್ಟದ 79 ನೇ ಸ್ವಾತಂತ್ರೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರೆವೇರಿಸಿ ಮಾತನಾಡಿದರು.

ದೇಶದಾದ್ಯಂತ ಹಲವು ಮಹನೀಯರ ಬಲಿದಾನದಿಂದಾಗಿ ಇಂದು ಸ್ವಾತಂತ್ರೋತ್ಸವವನ್ನು ಆಚರಿಸಲು ಸಾಧ್ಯವಾಗಿದೆ. ವೀರರಾಣಿ ಕಿತ್ತೂರ ರಾಣಿ ಚನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಸೇರಿದಂತೆ ಅನೇಕ ಮಹನೀಯರು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಂದಿಗೆ ಹೋರಾಡಿ ವೀರ ಮರಣ ಹೊಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ ಅಹಿಂಸೆ ಮತ್ತು ಅಸಹಕಾರ ತತ್ವಗಳಿಂದ ಕೂಡಿದ ಚಳುವಳಿಗಳ ಮೂಲಕ ದೇಶದ ಇತಿಹಾಸ ಇಡೀ ಪ್ರಪಂಚಕ್ಕೆ ಮಾದರಿಯಾಗಿದೆ ಎಂದರು.

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಎಲ್ಲಾ ವರ್ಗದ ಸಮುದಾಯಗಳಿಗೆ ಸಮಾನವಾಗಿ ಯೋಜನೆಗಳನ್ನು ತಲುಪಿಸುವ ಮೂಲಕ ಜನತೆ ನೆಮ್ಮದಿಯಿಂದ ಜೀವನ ಸಾಗಿಸಲು ನೆರವಾಗಿದ್ದು, ಗ್ಯಾರಂಟಿ ಯೋಜನೆಗಳಿಂದ ಪ್ರತಿ ತಾಲೂಕಿನ ಜನತೆಗೆ ಸುಮಾರು ರೂ. 400 ಕೋಟಿ ರೂ ನೆರವು ದೊರೆಯುತಿದ್ದು, ಇದರ ಜೊತೆಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಸಹ ಪೂರಕವಾದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದರು. ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಲಾಗುತ್ತಿದ್ದು, ಕಾರ್ಮಿಕರ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಕಾರ್ಮಿಕ ಶಾಲೆ ತೆರೆಯುವ ಮೂಲಕ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಲಾಗುವುದು ಹಾಗೂ ವಸತಿ ಶಾಲೆಗಳ ನಿರ್ಮಾಣಕ್ಕೆ ಕೂಡಾ ಆದ್ಯತೆ ನೀಡಲಾಗಿದೆ. ಜಿಲ್ಲೆಯಲ್ಲಿ ಶಿಕ್ಷಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಪ್ರಥಮಾದ್ಯತೆ ನೀಡಿದ್ದು ಇದರಲ್ಲಿ ಯಾವುದೇ ಸಮಸ್ಯೆ ತಲೆದೋರದಂತೆ ಎಲ್ಲಾ ರೀತಿಯ ನೆರವು ಒದಗಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಗರಿಷ್ಠ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ, ಪ್ರವಾಸಿ ತಾಣಗಳ ಸಮಗ್ರ ಮಾಹಿತಿಯುಳ್ಳ ಕಾಫಿ ಟೇಬಲ್ ಬುಕ್ ಬಿಡುಗಡೆ, ಉತ್ತರ ಕನ್ನಡ ಜಿಲ್ಲಾ ಪ್ರವಾಸಿ ತಾಣಗಳ ಕುರಿತು ಅಧಿಕೃತ ವೆಬ್‌ಸೈಟ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ಚಾಲನೆ ಮತ್ತು ಪ್ರವಾಸಿ ಮಿತ್ರರಿಗೆ ಸಮವಸ್ತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಗಣಪತಿ ಉಳ್ವೇಕರ್, ನಗರ ಸಭೆ ಅಧ್ಯಕ್ಷ ರವಿರಾಜ್ ಚಂದ್ರಹಾಸ ಅಂಕೋಲೆಕರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸುಷಮಾ ಗೋಡಬೋಲೆ, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ದೀಲಿಷ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ರವಿ ಶಂಕರ್, ತರಬೇತಿ ನಿರತ ಐ.ಎ.ಎಸ್ ಅಧಿಕಾರಿ ಝುಪಿಶಾನ್ ಹಕ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಸತೀಶ್ ನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

ಪೊಲೀಸ್, ಅರಣ್ಯ, ಗೃಹ ರಕ್ಷಕ ದಳ, ಎನ್.ಸಿ.ಸಿ, ಸ್ಕೌಟ್ಸ್ ಅಂಡ್ ಗೈಡ್ಸ್, ಸೇವಾದಳ, ತಂಡಗಳಿಂದ ಆಕರ್ಷಕ ಪಥ ಸಂಚಲನ ಹಾಗೂ ಶಾಲಾ ವಿದ್ಯಾರ್ಥಿಗಳಿಂದ ದೇಶಭಕ್ತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

## ಮಾಜಿ ಸೈನಿಕರಿಂದ ಮಕ್ಕಳಿಗೆ ಬ್ಯಾಗ ವಿತರಣೆ



ಹುಕ್ಕೇರಿ; 79ನೆ ಸ್ವಾತಂತ್ರೋತ್ಸವ ನಿಮಿತ್ಯ ಹುಕ್ಕೇರಿ ತಾಲುಕಿನ ಮದಿಹಳಿ ಸರಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಮಾಜಿ ಸೈನಿಕರಿಂದ ಬ್ಯಾಗ ವಿತರಣೆ ಕಾರ್ಯಕ್ರಮ ಜರುಗಿತು.

ಮಾಜಿ ಸೈನಿಕರ ಕ್ಷೇಮಾಭಿವೃದ್ದಿ ಸಂಘದ ಸಂಸ್ಥಾಪಕ ಮಹಾದೇವ ಬನ್ನಕ್ಕಗೋಳ ಅವರ ಕೊಡಮಾಡಿದ 40 ವಿದ್ಯಾರ್ಥಿಗಳಿಗೆ ಶಾಲಾ ಸಮಿತಿಯವರು ಮಕ್ಕಳಿಗೆ ನೀಡಿದರು.

## ದೇಶಭಕ್ತಿ ವರ್ಷಕ್ಕೆ ಕೇವಲ 2.ದಿನಕ್ಕೆ ಸೀಮಿತ ಆಗದೇ ನಮ್ಮ ಪ್ರತಿ ಕ್ಷಣಗಳಲ್ಲು ಅದನ್ನು ಉಳಿಸಿ ಬೆಳೆಸಬೇಕಾಗಿದೆ



ಮುಧೋಳ: ಸ್ವತಂತ್ರ ಭಾರತ ಈ ಪವಿತ್ರ ದಿನದಂದು, ನಮ್ಮ ಪ್ರೀತಿಯ ಮಾತೃಭೂಮಿಯನ್ನು ವಸಾತುಶಾಹಿ ಆಳ್ವಿಕೆಯ ಹಿಡಿತದಿಂದ ಮುಕ್ತಗೊಳಿಸಲು ಅವಿರತ ಹೋರಾಟದ ನಮ್ಮ ಪೂರ್ವಜರ ಧೈರ್ಯ, ತ್ಯಾಗ ಮತ್ತು ಸಂಕಲ್ಪದ ಅಭಿಮಾನ ಪಡಬೇಕಾಗಿದೆ, ಗರ್ವದಿಂದ ನಾನೊಬ್ಬ ಭಾರತೀಯ ಎಂದು ತಲೆಎತ್ತಿ ನುಡಿಯಬೇಕಾಗಿದೆ ಎಂದು ತಹಸೀಲ್ದಾರ ಮಹಾದೇವ ಸನಮುರಿ ಹೇಳಿದರು.

ನಗರದ ಕವಿಚಕ್ರವರ್ತಿ ರನ್ನಕ್ರೀಡಾಂಗಣದಲ್ಲಿ 79ನೇ ಸ್ವಾತಂತ್ರೋತ್ಸವದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ದೇಶಭಕ್ತಿ ವರ್ಷಕ್ಕೆ ಕೇವಲ 2.ದಿನಕ್ಕೆ ಸೀಮಿತ ಆಗದೇ ನಮ್ಮ ಪ್ರತಿ ಕ್ಷಣಗಳಲ್ಲು ಅದನ್ನು ಉಳಿಸಿ ಬೆಳೆಸಬೇಕಾಗಿದೆ. ಎಂದು ಅವರು ಸಾರ್ವಜನಿಕರಲ್ಲಿ ವಿನಂತಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಉಪ-ತಹಸೀಲ್ದಾರ ಆರ್.ಎ. ನಾಯಕ, ಎಂ.ವಿ. ಮಠದ, ಎಸ್.ಎಸ್. ಕುಂದರಗಿ, ಬಸವರಾಜ ಬಿ.ವಿ. ಕಂದಗಲ್, ಮೇಜರ ರಮೇಶ ಹಲಗಲಿ, ಅಪ್ಪಾಸಾಬ ನಿಂಬಾಳಕರ, ನಗರಸಭೆ ಅಧ್ಯಕ್ಷೆ ಸುನಂದಾ ತೇಲಿ, ಎಪಿಎಂಸಿ. ಅಧ್ಯಕ್ಷ ಸಂಗಪ್ಪ ಇಮ್ಮನ್ನವರ, ಉಪಾಧ್ಯಕ್ಷ ಎಸ್.ಎಸ್. ಮೆಟಗುಡ್ಡ, ಸದಸ್ಯ ತಳಕೇರಿ, ಗುರುಪಾದ ಕುಳಲಿ, ನೀಲಾಬಾಯಿ ರಜಪುತ, ಕಸಾಪ. ಅಧ್ಯಕ್ಷ ಆನಂದ ಪೂಜಾರಿ, ಇಓ. ಮಂಜುನಾಥ ಅಂಬಿಗೇರ, ಬಿಇಓ. ಎಸ್.ಎಂ. ಮುಲ್ಲಾ, ಸಿಪಿಆಯ್. ಮಹಾದೇವ ಸಿರಹಟ್ಟಿ, ಎಸ್ಸೈ. ಅಜಿತಕುಮಾರ ಹೊಸಮನಿ, ಎಸ್.ಎಸ್. ಮೊರಬ, ಸಿಡಿಪಿಓ. ವಿಮಲಾ ಬಂಗಾರಪ್ಪನವರ, ರೇಷ್ಮೆ ಇಲಾಖಾಧಿಕಾರಿ ರಮೇಶ ನಿಡೋಣಿ, ಸಂಗಮೇಶ ನೀಲಗುಂದ, ಪ್ರಕಾಶ ಹೊಸಮನಿ, ಗಂಗಾಧರ ಗಾಣಗೇರ ಬಸವರಾಜ ಬಳ್ಳಾರಿ, ಬಾಲು ದೊಡಮನಿ ಇತರರಿದ್ದರು.

## ಗೋಗಟೆ ವಾಣಿಜ್ಯ ಮಹಾವಿದ್ಯಾಲಯದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ



ಬೆಳಗಾವಿಯ : ಕೆ.ಎಲ್.ಎಸ್. ಸಂಸ್ಥೆಯ ಗೋಗಟೆ ವಾಣಿಜ್ಯ ಮಹಾವಿದ್ಯಾಲಯದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ಯ ರಾಷ್ಟ್ರಧ್ವಜಾರೋಹಣ ಮಾಡಲಾಯಿತು.

ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾರತೀಯ ಸೇನೆಯ ನಿವೃತ್ತ ಕ್ಯಾಪ್ಟನ್ ಶ್ರೀ ಉತ್ತಮ್ ಡಿ. ಶಿಂಧೆ ದೇಶಾಭಿಮಾನದ ಕುರಿತು ವಿದ್ಯಾರ್ಥಿಗಳಿಗೆ ಮನಮುಟ್ಟುವ ರೀತಿಯಲ್ಲಿ ಮಾತನಾಡಿದರು.

ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನ ನಿವೃತ್ತ ವಿಶೇಷಾಧಿಕಾರಿಗಳು ಡಾ. ಎಂ. ಜಯಪ್ಪ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದ ಅನೇಕ ಮಹಾತ್ಮರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು. ಅಂದು ಭಾರತದಲ್ಲಿ ಏನೂ ಇರಲಿಲ್ಲ, ಆಹಾರಕ್ಕಾಗಿ, ಬಟ್ಟೆಗಾಗಿ ಪರದಾಡುವಂಥ ಸ್ಥಿತಿ ಇತ್ತು. ಸುಮಾರು 78 ವರ್ಷದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ ಎಂದರು.

ಕೃಷಿ ಕ್ಷೇತ್ರದಲ್ಲಿ ಆಗಿರಬಹುದು, ತಂತ್ರಜ್ಞಾನದಲ್ಲಿ ಆಗಿರಬಹುದು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಆಗಿರಬಹುದು ಭಾರತ ದೇಶವು ಸಾಕಷ್ಟು ಪ್ರಗತಿಯನ್ನು ಹೊಂದಿದೆ ಎಂದು ಮನದುಂಬಿ ಹೊಗಳಿದರು.

ವಿದ್ಯಾರ್ಥಿಯಗಳು ದೇಶಭಕ್ತಿಯ ಗೀತೆಯನ್ನು ಹಾಡಿದರು ಮತ್ತು ಸಾಮಾಜಿಕ ಸಂದೇಶದಲ್ಲಿ ನುಕ್ಕಡ ನಾಟಕವನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ. ವೇಣುಗೋಪಾಲ ಜಾಲಿಹಾಳ ಅವರು ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಭಾರತವು ವಿಶ್ವದ ಬಹುದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ



ರಬಕವಿ-ಬನಹಟ್ಟಿ, ತಾತ್ವಿಕ, ಭೌದ್ದಿಕ, ವೈಜ್ಞಾನಿಕ, ಶೈಕ್ಷಣಿಕ, ಆರ್ಥಿಕ ಹೀಗೆ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಭಾರತವು ವಿಶ್ವದ ಬಹುದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ಈ ನಿಟ್ಟಿನಲ್ಲಿ ಭಾರತವು ಸಂಪೂರ್ಣ ಸ್ವಾವಲಂಬನೆಯತ್ತ ದಾಪುಗಾಲು ಇರಿಸಿದೆ. ಭಾರತದ ಯುವಶಕ್ತಿ ಭಾರತವನ್ನು ಪ್ರಗತಯತ್ತ ಕೊಂಡೊಯುತ್ತಿದೆ. ಪ್ರತಿಯೊಬ್ಬರು ದೇಶಾಭಿಮಾನವನ್ನು ಬೆಳೆಸಿಕೊಳ್ಳಬೇಕು ಎಂದು ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ತಿಳಿಸಿದರು.

ಅವರು ಶುಕ್ರವಾರ ರಬಕವಿ-ಬನಹಟ್ಟಿ ತಹಶೀಲ್ದಾರ ಕಾರ್ಯಾಲಯದಲ್ಲಿ 79ನೇ ಸ್ವಾತಂತ್ರ್ಯೋತ್ಸವದ ನಿಮಿತ್ತ ಧ್ವಜಾರೋಹನ ನೆರವೇರಿಸಿ ಮಾತನಾಡಿದರು. ನಮ್ಮ ದೇಶದ ಚರಿತ್ರೆ ಹಾಗೂ ಪರಂಪರೆಯ ಗರ್ಭದಲ್ಲಿ ಸಾಹಿತ್ಯಕ, ತಾತ್ವಿಕ, ಧಾರ್ಮಿಕ, ಸಾಂಸ್ಕೃತಿಕ ಬಂಢಾರವಿದೆ. ಭಾರತದ ಬದುಕಿಗೆ ವೈವಿಧ್ಯಮಯ ಆಯಾಮಗಳಿವೆ. ಇಡೀ ದೇಶ ಅನೇಕತೆಯಲ್ಲಿ ಏಕತೆ ಸಾಧಸಿದೆ. ಏಕತೆಯಲ್ಲಿ ಅನೇಕತೆಯನ್ನು ಕಂಡು ಕೊಂಡಿದೆ. ಇಂಥ ವೈವಿಧ್ಯಮಯ ಸಾಂಸ್ಕೃತಿಕ ವೈಭವವನ್ನು ಹೊಂದಿದ ರಾಷ್ಟ್ರ ಇಡೀ ವಿಶ್ವದಲ್ಲೇ ಇನ್ನೊಂದಿಲ್ಲ ಎಂಬ ಹೆಮ್ಮೆ ನಮ್ಮದಾಗಿದೆ. ಇಂದು ನಮ್ಮ ರಾಷ್ಟ್ರ ತನ್ನ ಬೌದ್ಧಿಕ, ತಾತ್ವಿಕ, ವೈಜ್ಞಾನಿಕ ವೈಚಾರಿಕ ಬಲದಿಂದ ವಿಶ್ವಮಾನ್ಯತೆ ಗಳಿಸಿದೆ. ಇಲ್ಲಿಯ ಪ್ರತಿಯೊಬ್ಬ ಪ್ರಜೆ ಭಾರತ ಎಂಬುದನ್ನು ಇಡೀ ವಿಶ್ವವೇ ಮನಗಂಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪತಹಶೀಲ್ದಾರ ಶಾಂತಾ ಕೂಗಾಟೆ, ಆರ್. ಎಸ್. ಸಾತಿಹಾಳ, ಅಧಿಕಾರಿಗಳಾದ ಪಿ. ಆರ್. ಮಠಪತಿ, ಸದಾಶಿವ ಕುಂಬಾರ, ಮಂಜುನಾಥ ನೀಲನ್ನವರ, ಪ್ರಕಾಶ ವಂದಾಲ, ಚೇತನ ಭಜಂತ್ರಿ, ರವಿ ಹುಲ್ಲೆನ್ನವರ, ರವಿ ಗಡೆಪ್ಪನವರ, ಸಂಗೀತಾ ಮಿರ್ಜಿ, ದೀಪಾ ಮೇತ್ರಿ, ಮಹಾದೇವಿ ಗಸ್ತಿ, ಕಿಶೋರ ಸೋನೋನೆ, ರಾಜು ಮೇಲಿನಮನಿ, ಶ್ರೀಮಂತ ಸೇರಿದಂತೆ ಅನೇಕರು ಇದ್ದರು.

***

## ರಾಯಬಾಗ : ಸರ್ಕಾರಿ ನೌಕರರ ಭವನದ ಆವರಣದಲ್ಲಿ ಧ್ವಜಾರೋಹಣ



ರಾಯಬಾಗ: ನಮ್ಮ ದೇಶಕ್ಕೆ ಹಲವಾರು ಮಹನೀಯರ ತ್ಯಾಗ ಬಲಿದಾನಗಳಿಂದ ಸ್ವಾತಂತ್ರ್ಯ ಲಭಿಸಿದ್ದು, ಅವರೆಲ್ಲರ ಸ್ಮರಣೆ ಮಾಡಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಶಾಖೆ ರಾಯಬಾಗ ಅಧ್ಯಕ್ಷರಾದ ಉಮೇಶ ಭೂಪಾಲ ಪೋಳ ಮಾತನಾಡಿ ರಾಯಬಾಗ ಸರ್ಕಾರಿ ನೌಕರರ ಭವನದ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಎಲ್ಲರಿಗೂ 79ನೇ ಸ್ವಾತಂತ್ರ್ಯ ದಿನಾಚರಣೆ ಶುಭಾಶಯ ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಡಾ. ಸುರೇಶ್ ಕದ್ದು, ರಾಜ್ಯ ಪರಿಷತ್ ಸದಸ್ಯರಾದ ಮಲಿಕಜಾನ್ ಕೊರ್ಬು, ಸಂಘಟನಾ ಕಾರ್ಯದರ್ಶಿ ಕಲ್ಲಪ್ಪ ಗುಡಿಮನಿ, ನಾಮ ನಿರ್ದೇಶಿತ ನಿರ್ದೇಶಕರಾದ ಭಗವಂತ ಮಸಾಲಜಿ, ನಿಂಗಪ್ಪ ಬೀರಣಗಡ್ಡಿ, ಸದಾಶಿವ ಕಾಂಬಳೆ, ಪರಶುರಾಮ ಕುಂಬಾರ, ಸವಿತಾ ಜೋಲಾಪೂರೆ, ಮತ್ತಿತರು ಹಾಜರಿದ್ದರು.

### ಕೃಷ್ಣೆಯ ಜನ್ಮ–ವಿಲೀನ ವಿಶೇಷ॥ ಕೃಷ್ಣೆ ಅಣೆಕಟ್ಟು–ಉಪನದಿಗಳು॥ ಗಮನ ಸೆಳೆದ ಜಲಪಾತಗಳು॥

## ಕೃಷ್ಣೆಗೆ ಆರತಿ ಏಕೆ? ಆಲಮಟ್ಟಿ 519.6 ಮತ್ತು 524.6 ಎತ್ತರದಿಂದ ಲಾಭನಷ್ಟ॥

# ನಿರಾಶೆ ಸಮೃದ್ಧಿ ಜೀವನ ನೀಡಿದ ನಮ್ಮೆಲ್ಲರ ಜೀವನಾಡಿ ಕೃಷ್ಣೆ

**ತಾಲೂಕಿನ ಹಿಪ್ಪರಗಿಯಲ್ಲಿ ಶ್ರೀಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ಅಗಷ್ಟ 16ರಂದು ನಮ್ಮೆಲ್ಲರ ಜೀವನಾಡಿ ಕೃಷ್ಣಾ ಪುಣ್ಯಸ್ನಾನ, ಕೃಷ್ಣಾರತಿ, ಪಲ್ಲಕ್ಕಿಗಳ ಉತ್ಸವ, ನಾಗಾಸಾಧುಗಳ ದರ್ಶನ ಮತ್ತು ಛಲದಂಗ ಶ್ರೇಷ್ಠ ಮಾಜಿ ಸಚಿವ ಮುರಗೇಶ ನಿರಾಣಿ ಅವರ 60ನೇ ವರ್ಷದ ಹುಟ್ಟುಹಬ್ಬದ ನಿಮಿತ್ತ ವಿಶೇಷ ಲೇಖನ.**



ಕೃಷ್ಣಾನದಿ ಭಾರತದ ಪ್ರಮುಖ ನದಿಯಾಗಿದ್ದು, ಉತ್ತರಭಾರತ ಗಂಗೆಯಷ್ಟು ದಕ್ಷಿಣಭಾರತದ ಕೃಷ್ಣೆ ಕೂಡ ಪವಿತ್ರೆ. ನಮ್ಮಲ್ಲಿ ಕೃಷ್ಣಾನದಿ ಶ್ರೇಷ್ಠತೆಯ ಭಾವನೆಗಳು ಹೆಚ್ಚಾಗಬೇಕಾಗಿದೆ. ಮಹಾರಾಷ್ಟ್ರದ ಪಶ್ಚಿಮಘಟ್ಟಗಳಿಂದ ಹುಟ್ಟುವ ಕೃಷ್ಣೆ ಪ್ರಮುಖ ಭೌಗೋಳಿಕ ಲಕ್ಷಣವಾಗಿದೆ. ಮಹಾರಾಷ್ಟ್ರದಲ್ಲಿ ಹುಟ್ಟುವ ಮೂಲಕ ಅಂತಿಮವಾಗಿ ಬಂಗಾಳಕೊಲ್ಲಿ ಸಮುದ್ರದಲ್ಲಿ ವಿಲೀನಗೊಳ್ಳುವ ಮೊದಲು ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಶಾಂತವಾಗಿ ಮೈದುಂಬಿ ಹರಿದು ರೈತರ, ಜನ–ಜಾನುವಾರಗಳ ಭಗೀರಥ ಭಾಗ್ಯದೇವತೆಯಾಗಿ ಗುರುತಿಸಿಕೊಂಡಿದೆ.

ಕೃಷ್ಣಾನದಿ ಏಕೆ ಮುಖ್ಯವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಭಾರತದಲ್ಲಿ ಕೃಷ್ಣಾನದಿಯ ನಕ್ಷೆ, ಎಡ ಮತ್ತು ಬಲದಂಡೆ ಉಪನದಿಗಳು ಮತ್ತು ಅಣೆಕಟ್ಟುಗಳು ಸಹಿತ ನಿರಾಶೆ ಮತ್ತು ಸಮೃದ್ಧಿ ಕರುಣಿಸಿದ ಕೃಷ್ಣೆಯ ಕುರಿತು ಜನರಲ್ಲಿ ಹೆಚ್ಚಾಗಿ ಜಾಗೃತಿ ಮೂಡಿಬೇಕಾಗಿದೆ. ನಮ್ಮೆಲ್ಲರ ಕೃಷ್ಣೆಯನ್ನು ಉಳಿಸಿಕೊಳ್ಳುವ ಯಾವುದೇ ಸಂದರ್ಭದಲ್ಲಿ ನಾವೆಲ್ಲರೂ ಕೃಷ್ಣೆಯ ಪೌರಾಣಿಕ ಮಹತ್ವ ಮತ್ತು ಇತಿಹಾಸವನ್ನು ಅರ್ಥೈಸಿಕೊಂಡು ಚರ್ಚಿಸುವ ಸಾಮಾರ್ಥ್ಯವನ್ನು ಬೆಳಸಿಕೊಳ್ಳಬೇಕಾಗಿದೆ. ಅನಿವಾರ್ಯತೆ ಎದುರಾದರೇ ಅಸ್ಥಿತ್ವಕ್ಕಾಗಿ ಉಳಿಸಿಕೊಳ್ಳಲು ಎಲ್ಲ ರೀತಿ ಹೋರಾಟಗಳಿಗೆ ನಾವೆಲ್ಲರೂ ಸಿದ್ಧರೆಂದು ಸಾಬೀತು ಮಾಡಬೇಕಾಗಿದೆ

ಮಹಾರಾಷ್ಟ್ರ ಪಶ್ಚಿಮಘಟ್ಟಗಳಿಂದ ಹುಟ್ಟುವ ನದಿ ಕೃಷ್ಣನದಿ. ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಉದ್ಭವಗೊಳ್ಳುವ ಕೃಷ್ಣಾನದಿ ಅಂದಾಜು 1400 ಕಿ.ಮೀ ದೂರ ಕ್ರಮಿಸುವ ಮೂಲಕ 258948 ಚದರ ಕಿ.ಮೀ. ಜಲಾನಯನ ಪ್ರದೇಶವನ್ನು ಹೊಂದಿದೆ. ತುಂಗಭದ್ರ, ಭೀಮಾ, ಮಲ್ಲಪ್ರಭಾ, ಘಟಪ್ರಭಾ, ಯೆರ್ಲಾ, ವರ್ಣಾ ಮತ್ತು ದಿಂಡಿ ನದಿಗಳು ಕೃಷ್ಣೆಯ ಉಪನದಿಗಳಾಗಿ ಗುರುತಿಸಿಕೊಂಡಿವೆ. ಮಹಾಬಲೇಶ್ವರದಲ್ಲಿ ಉದ್ಭವಗೊಳ್ಳುವ ಭಾಗ್ಯದೇವತೆ ಕೃಷ್ಣಾನದಿ ಮಹಾರಾಷ್ಟ್ರ ಕರ್ನಾಟಕ, ತೆಲಂಗಾಣ ಆಂಧ್ರಪ್ರದೇಶ ಮೂಲಕ ಬಲ ಮತ್ತು ಎಡದಂಡೆ ಉಪನದಿಗಳ ಮೂಲಕ ಬಂಗಾಲಕೊಲ್ಲಿ ಸಮುದ್ರ ಸೇರುತ್ತದೆ.

ಗಂಗಾ, ಗೋದಾವರಿ ಮತ್ತು ಬ್ರಹ್ಮಪುತ್ರ ನಂತರ ನೀರಿನ ಒಳಹರಿವು ಮತ್ತು ಜಲಾನಯನ ಪ್ರದೇಶ ಹೊಂದಿದ್ದು ಕೃಷ್ಣಾನದಿ. ಭಾರತದೇಶ ನಾಲ್ಕನೇ ಅತಿ–ದೊಡ್ಡ ನದಿಯಾಗಿ ಅಂದಾಜು 1400 ಕಿ.ಮೀ. ದೂರದವರೆಗೆ ಕ್ರಮಿಸುತ್ತದೆ. ಪೂರ್ವಕ್ಕೆ ಹರಿಯುವ ಎರಡನೇ ಅತಿದೊಡ್ಡ ನದಿಯಾಗಿ, ಜಲವಿಜ್ಞಾನದ ಪ್ರಾಮುಖ್ಯತೆ ಹೊಂದಿದೆ. ಇದಲ್ಲದೆ ಕೃಷ್ಣೆ ಅಂದಾಜು 258948 ಚದರ ಕಿ.ಮೀ.ಗಳಷ್ಟು ಜಲಾನಯನ ಪ್ರದೇಶ ಹೊಂದುವ ಮೂಲಕ ಮಳೆಗಾಲದಲ್ಲಿ ಅಂದಾಜು 3500 ಟಿಎಂಸಿ ನೀರು ಕೃಷ್ಣಾನದಿ ಮೂಲಕ ಬಂಗಾಲಕೊಲ್ಲಿ ಸಮುದ್ರಕ್ಕೆ ಹರಿಯುತ್ತದೆ.

ನಮ್ಮೆಲ್ಲರ ಭಾಗ್ಯದೇವತೆ, ಜೀವನಾಡಿ ಕೃಷ್ಣಾನದಿ ಭಾರತದೇಶದ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ ಸಹಿತ ನಾಲ್ಕು ರಾಜ್ಯದಲ್ಲಿ ಹರಿಯುತ್ತದೆ.

ಕೃಷ್ಣಾನದಿ ಮಹಾರಾಷ್ಟ್ರದ ಸತಾರಾ ಜಿಲ್ಲೆ ಉತ್ತರ ಭಾಗದ ಜೋರ್ ಗ್ರಾಮದ ಹತ್ತಿರ ಭೂಮಿಯಿಂದ 1336 ಮೀಟರ ಎತ್ತರದಲ್ಲಿ ಹುಟ್ಟುತ್ತದೆ. ಇದು ಪೂರ್ವ ದಿಕ್ಕಿನಲ್ಲಿ ಕೃಷ್ಣಾನದಿ ಹರಿಯಲು ಆರಂಭಿಸುತ್ತದೆ. ವಿವಿಧ ಪ್ರದೇಶಗಳ ಮೂಲಕ ಹರಿಯುವ ಕೃಷ್ಣಾನದಿ ಅಂತಿಮವಾಗಿ ಆಂಧ್ರಪ್ರದೇಶದ ಮೂಲಕ ಬಂಗಾಳಕೊಲ್ಲಿ ಸಮುದ್ರ ತಲುಪುತ್ತದೆ. ಕೃಷ್ಣಾನದಿ ತಾನು ಸಾಗುವ ದಾರಿಯಲ್ಲಿ ಪ್ರಮುಖ ನಗರ ಮತ್ತು ಗ್ರಾಮಗಳನ್ನು ಸುತ್ತುವರಿದು ಕೃಷ್ಣೆಯ ಆಗಮನ ಸೃಷ್ಟಿಯಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಪ್ರವಾಹ ಅನುಭವಿಸಿದ್ದು ಇರುತ್ತದೆ. ಸನ್ 2018, 2021 ಹೀಗೆ ಹತ್ತಾರು ಸಂಕಷ್ಟದ ನೆನಪುಗಳು ಇಲ್ಲಿವೆ. ಕೃಷ್ಣಾ ಜಲಾನಯನ ಪ್ರದೇಶವು 258948 ಕಿ.ಮೀ ವಿಸ್ತರಿಸಿದೆ. ಕೃಷ್ಣೆನದಿ ದೇಶದ ಒಟ್ಟು ಭೌಗೋಳಿಕ ಪ್ರದೇಶದ ಅಂದಾಜು ಶೇಕಡಾ 8 ರಷ್ಟು ವಿಸ್ತಾರವಾಗಿದ್ದು, ಶಾಂತವಾಗಿ ಹರಿಯುವ ಮೂಲಕ ಜನರ ಜೀವನದ ಹಸಿರಾಗಿದೆ. ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ನಾಲ್ಕು ರಾಜ್ಯಗಳು ಭಾರತದೇಶದ ದೊಡ್ಡ ಜಲಾನಯನ ಪ್ರದೇಶಗಳಾಗಿ ಗುರುತಿಸಿಕೊಂಡಿವೆ.

ಕರ್ನಾಟಕದಲ್ಲಿ 113271, ಮಹಾರಾಷ್ಟ್ರ: 69425 ಮತ್ತು ತೆಲಂಗಾಣ, ಆಂಧ್ರಪ್ರದೇಶ: 76252 ಚದುರ ಕಿ.ಮೀ. ಗಳಷ್ಟು ಜಲಾನಯನ ಪ್ರದೇಶ ಹೊಂದಿದೆ. ಕೃಷ್ಣಾನದಿ ಮತ್ತು ಅದರ ಉಪನದಿಗಳು ಮನಮೋಹಕ ಸುಂದರವಾದ ಜಲಪಾತಗಳನ್ನು ಸೃಷ್ಟಿ ಮಾಡಿವೆ. ಅವುಗಳಲ್ಲಿ ಗೋಕಾಕ ಜಲಪಾತ (ಫಾಲ್ಸ್), ಕಲ್ಲತಿ ಜಲಪಾತ, ತೀರ್ಥ ಜಲಪಾತ, ಮಾಣಿಕ್ಯಧಾರ ಜಲಪಾತ, ಹಂಪಿ ಜಲಪಾತ (ತುಂಗಭದ್ರಾ ನದಿ) ಮಾಗೋಡ ಜಲಪಾತ (ಯೆಲ್ಲಾಪುರ ತಾಲ್ಲೂಕಿನಲ್ಲಿ) ಮನಸೂರೆಗೊಳಿಸುವ ಜಲಪಾತಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಪಶ್ಚಿಮಘಟ್ಟಗಳು ಮತ್ತು ಡೆಕ್ಕನ್ ಪ್ರಸ್ಥಭೂಮಿಯಿಂದ ಹುಟ್ಟುವ ಹಲವಾರು ಉಪನದಿಗಳಿಂದ ಕೃಷ್ಣಾನದಿ ಮೈದುಂಬಿ ಹರಿಯುತ್ತಿದೆ. ತುಂಗಭದ್ರಾ, ಭೀಮಾ, ಮಲ್ಲಪ್ರಭಾ, ಘಟಪ್ರಭಾ, ಯೆರ್ಲಾ, ವರ್ಣಾ ಮತ್ತು ದಿಂಡಿ ನದಿಗಳು ಪ್ರಮುಖ ಉಪನದಿಗಳಾಗಿ ಗುರುಸಿಕೊಂಡಿವೆ. ಅದರಲ್ಲಿ ಬಲ ಮತ್ತು ಎಡದಂಡೆ ಉಪನದಿಗಳು ತನ್ನದೇ ಯಾದ ವೈಶಿಷ್ಟಯನ್ನು ಹೊಂದಿದ್ದು ವಿಶೇಷವಾಗಿದೆ.

**ಬಲದಂಡೆ ಉಪನದಿಗಳ ವಿವರ......**

ಬಲದಂಡೆ ಉಪನದಿಗಳಾದ ಕರ್ನಾಟಕದ ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಕೃಷ್ಣೆ ಬಲದಂಡೆಯ ಉಪನದಿ ತುಂಗಭದ್ರಾ ನದಿ ಆಂಧ್ರಪ್ರದೇಶದಲ್ಲಿರುವ ಕೃಷ್ಣಾನದಿ ಸೇರುತ್ತದೆ. ಅಂದಾಜು 531 ಕಿ.ಮೀ ಉದ್ದವಿರುವ ಕೃಷ್ಣಾನದಿ ಅಂದಾಜು 71417 ಚದರ



ಕಿ.ಮೀ ಜಲಾನಯನ ಪ್ರದೇಶ ಹೊಂದಿದೆ. ಕರ್ನಾಟಕದ ಪಶ್ಚಿಮಘಟ್ಟದಿಂದ ಪ್ರಾರಂಭವಾಗಿ ಮಲಪ್ರಭಾ ನದಿ ಬೈಲಹೊಂಗಲ ಹತ್ತಿರ ಕೃಷ್ಣಾನದಿ ಸೇರುತ್ತದೆ. ಅಂದಾಜು 304 ಕಿ.ಮೀ ಉದ್ದದ ಕೃಷ್ಣಾನದಿ 20000 ಚದರ ಕಿ.ಮೀ. ಜಲಾನಯನ ಪ್ರದೇಶ ಹೊಂದಿದೆ. ಕರ್ನಾಟಕದ ಪಶ್ಚಿಮಘಟ್ಟದಿಂದ ಹೊರಹೊಮ್ಮುವ ಘಟಪ್ರಭಾ ನದಿ ಗೋಕಾಕ ಹತ್ತಿರದ ಕೃಷ್ಣಾನದಿ ಸೇರುತ್ತದೆ. ಅಂದಾಜು 283 ಕಿ.ಮೀ ಉದ್ದದ ಕೃಷ್ಣಾನದಿ ಅಂದಾಜು 8829 ಚದರ ಕಿ.ಮೀ ಜಲಾನಯನ ಪ್ರದೇಶ ಹೊಂದಿದೆ. ಮಹಾರಾಷ್ಟ್ರದ ಐದು ನದಿಗಳ ಸಂಗಮದ ಪಂಚಗಂಗಾ ನದಿ ಕರಾಡ ಹತ್ತಿರ ಕೃಷ್ಣಾ ನದಿಯಲ್ಲಿ ವಿಲೀನವಾಗಿ ಅಂದಾಜು 111 ಕಿ.ಮೀ ಉದ್ದದ ಕೃಷ್ಣಾನದಿ ಅಂದಾಜು 6444 ಚದರ ಕಿ.ಮೀ ಜಲಾನಯನ ಪ್ರದೇಶ ಹೊಂದಿದೆ. ಮಹಾರಾಷ್ಟ್ರದಲ್ಲಿ ಹುಟ್ಟುವ ವಾರ್ಣಾ ನದಿ ಕರಾಡ ಹತ್ತಿರ ಕೃಷ್ಣಾ ನದಿ ಸೇರುತ್ತದೆ. 155 ಕಿ.ಮೀ. ವಿಸ್ತೀರ್ಣದಲ್ಲಿ ಹರಡಿದ ಕೃಷ್ಣಾನದಿ 1580 ಚದರ ಕಿ.ಮೀ. ವಿಸ್ತೀರ್ಣದಲ್ಲಿ ಹರಿದು ಐತಿಹಾಸಿಕ ತಾಣಗಳನ್ನು ಶ್ರೀಮಂತಗೊಳಿಸಿದೆ. ಮಹಾರಾಷ್ಟ್ರದಲ್ಲಿ ಹುಟ್ಟುವ ಕೊಯ್ನಾ ನದಿ ಕರಾಡ ಹತ್ತಿರ ಕೃಷ್ಣಾ ನದಿ ವಿಲೀನಗೊಳ್ಳುತ್ತದೆ. ಅಂದಾಜು 130 ಕಿ.ಮೀ ಉದ್ದ ಕೃಷ್ಣಾನದಿ 6024 ಚದರ ಕಿ.ಮೀ. ವಿಸ್ತೀರ್ಣದಲ್ಲಿ ಜಲವಿದ್ಯುತ್ ಉತ್ಪಾದನೆಯಲ್ಲಿ ತೊಡಗಿದೆ.

**ಎಡದಂಡೆ ಉಪನದಿಗಳ ವಿವರ......**

ಎಡದಂಡೆ ಉಪನದಿಗಳಾದ ಭೀಮಾನದಿ ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ರಾಯಚೂರಿನಲ್ಲಿ ಕೃಷ್ಣಾನದಿ ಸೇರುತ್ತದೆ. ಅಂದಾಜು 725 ಕಿ.ಮೀ ಉದ್ದದ ನದಿ ಅಂದಾಜು 70614 ಚದರ ಕಿ.ಮೀ. ವಿಸ್ತೀರ್ಣದಲ್ಲಿ ಹರಡಿ ಕೃಷಿಗೆ ಉಪಯುಕ್ತವಾಗಿದೆ. ಆಂಧ್ರಪ್ರದೇಶದ ಪೂರ್ವಘಟ್ಟಗಳಲ್ಲಿ ಮುನ್ನೇರು ನದಿ ನಂದಿಗಮ ಹತ್ತಿರ ಕೃಷ್ಣಾನದಿ ಸೇರುತ್ತದೆ. ಅಂದಾಜು 144 ಕಿ.ಮೀ ಉದ್ದದ ನದಿ ಅಂದಾಜು 3422 ಚದರ ಕಿ.ಮೀ ಪ್ರದೇಶದಲ್ಲಿ ಅಂತರ್ಜಲ ಹೆಚ್ಚಿಸುವ ಕ್ಷಮತೆ ಹೊಂದಿದೆ. ತೆಲಂಗಾಣದ ಅನಂತಗಿರಿ ಬೆಟ್ಟಗಳಲ್ಲಿ ಮೂಸಿ ನದಿ ವಿಕಾರಾಬಾದ ಹತ್ತಿರ ಕೃಷ್ಣಾನದಿಯಲ್ಲಿ ವಿಲೀನಗೊಳ್ಳುತ್ತದೆ. ಅಂದಾಜು 240ಕಿ.ಮೀ ಉದ್ದದ ನದಿ ಅಂದಾಜು 9699 ಚದರಕಿ.ಮೀ ವಿಸ್ತೀರ್ಣದಲ್ಲಿ ಹರಡಿರುವ ಸೌಂದರ್ಯಕ್ಕೆ ಸಾಕ್ಷಿಯಾಗಿದೆ. ಆಂಧ್ರಪ್ರದೇಶದ ಪೂರ್ವಘಟ್ಟಗಳಲ್ಲಿ ಹುಟ್ಟುವ ದಿಂಡಿ ನದಿ ನಂದಿಗಮ ಬಳಿ ಕೃಷ್ಣಾನದಿ ಸೇರುತ್ತದೆ. ಅಂದಾಜು 111 ಕಿ.ಮೀ ಉದ್ದದ ನದಿ ಅಂದಾಜು 2382 ಚದರ ಕಿ.ಮೀ ಪ್ರದೇಶದಲ್ಲಿ ವನ್ಯಜೀವಿಗಳಿಗೆ ಸಹಕಾರಿ ಆಗಿದೆ.



ಶಾಂತಿಯುತವಾಗಿ ಮೈದುಂಬಿ ಹರಿಯುವ ಕೃಷ್ಣಾನದಿ ಜನವಸತಿ, ರೈತರಿಗೆ, ವನ್ಯಜೀವಿಗಳಿಗೆ ನೀರಿನ ದಾಹ ತೀರಿಸುವ ನಿಟ್ಟಿನಲ್ಲಿ ವಿವಿಧ ಸ್ಥಳಗಳಲ್ಲಿ ಅಣೆಕಟ್ಟುಗಳು ನಿರ್ಮಾಣಗೊಂಡಿವೆ. ಕೃಷ್ಣಾನದಿ ಸಹಿತ ಉಪನದಿಗಳಿಗೂ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಕರ್ನಾಟಕದಲ್ಲಿ ಲಾಲಬಹದ್ದೂರ ಶಾಸ್ತ್ರೀ ಜಲಾಶಯ ಆಲಮಟ್ಟಿ, ನಾರಾಯಣಪುರ ಅಣೆಕಟ್ಟು, ತುಂಗಭದ್ರ ಜಲಾಶಯ, ತೆಲಂಗಾಣದಲ್ಲಿ ಜುರಾಲ ಅಣೆಕಟ್ಟು, ಶ್ರೀಶೈಲಂ ಅಣೆಕಟ್ಟು, ಆಂಧ್ರಪ್ರದೇಶದಲ್ಲಿ ನಾಗಾರ್ಜುನ ಸಾಗರ, ಮಹಾರಾಷ್ಟ್ರದಲ್ಲಿ ಕೊಯಿನಾ ಡ್ಯಾಂ ಸಹಿತ ಕೃಷ್ಣಾನದಿ ಸಹಿತ ಎಡ ಮತ್ತು ಬಲದಂಡೆ ಪ್ರಮುಖ ಉಪನದಿಗಳು, ಜಲಾನಯನದ ಪ್ರದೇಶ ಮತ್ತು ಕೃಷ್ಣಾನದಿಯ ಉದ್ದಕ್ಕೂ ಅವಶ್ಯಕತೆಗೆ ಅನುಗುಣವಾಗಿ ಅಣೆಕಟ್ಟು, ಜಲಾಶಯಗಳು, ಚೆಕ್ ಡ್ಯಾಮಗಳು ನಿರ್ಮಾಣಗೊಂಡಿವೆ.



**ನೋವು–ದುಃಖದಲ್ಲಿ ರೈತರು......**

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಈಗಾಗಲೇ ಒಂದು ಹಂತದಲ್ಲಿ ಬಹಳಷ್ಟು ಜಮೀನು ಕಳೆದುಕೊಂಡು ನೆಲೆ ಇಲ್ಲದ ನೋವು, ಕಷ್ಟದಲ್ಲಿ ನಾವೆಲ್ಲರೂ ಜೀವನ ಸಾಗಿಸುತ್ತಿದ್ದೇವೆ. ಅಂದಿನ ಮುಖ್ಯಮಂತ್ರಿ ದಿ.ಜೆ. ಎಚ್.ಪಟೇಲ ಆಡಳಿತ ಅವಧಿಯಲ್ಲಿ ಕೈಗೊಂಡ ಆಲಮಟ್ಟಿ 519.60 ಎತ್ತರದಿಂದ ನಮ್ಮ ಭಾಗದ ರೈತರಿಗೆ ಲಾಭಗಿಂತ ನಷ್ಟವೇ ಹೆಚ್ಚಾಗಿದೆ. ಆಲಮಟ್ಟಿ ಜಲಾಶಯ ಎತ್ತರದಿಂದ ರೈತರ್ಲು ಫಲವತ್ತಾದ ಭೂಮಿ ಕಳೆದುಕೊಳ್ಳಬೇಕಾಯಿತು. 104ಕ್ಕೂ ಹೆಚ್ಚು ಗ್ರಾಮಗಳು ಮುಳಗಡೆಯಾಗುವ ಮೂಲಕ ಸಾವಿರಾರು ಹೆಕ್ಟರ ಭೂಮಿಯನ್ನು ರೈತರು ಕಳೆದುಕೊಂಡರು. ಅಂದಿನ ಸರಕಾರ ಒಂದು ಎಕರೆ ಜಮೀನಿಗೆ 1.47 ಲಕ್ಷ ರೂ.ಗಳ ಪರಿಹಾರ ನೀಡುವ ಮೂಲಕ ಸಂತ್ರಸ್ಥರಿಗೆ ಪುನವಸತಿ ಕೇಂದ್ರಗಳನ್ನು ನಿರ್ಮಿಸಿಕೊಟ್ಟಿದೆ. ಆದರೆ ಇಂದಿಗೂ ರೈತರು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯ ಆಗದೇ ಪುನವಸತಿ ಕೇಂದ್ರಗಳಲ್ಲಿ ವಾಸಿಸಲು ಮನಸ್ಸಿಲ್ಲ. ಜಮೀನು ಮತ್ತು ಮನೆಗಳನ್ನು ಕಳೆದುಕೊಂಡ ರೈತರು ಭಾವನಾತ್ಮಕ ಸಂಬಂಧಗಳನ್ನು ಇಂದಿನವರೆಗೆ ಮರೆಯಲು ಸಾಧ್ಯವಾಗುತ್ತಿಲ್ಲ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಆಲಮಟ್ಟಿ ಜಲಾಶಯವನ್ನು 524.60 ಎತ್ತರಿಸುವ ಮಹತ್ತರ ಯೋಜನೆಯಲ್ಲಿ ಮತ್ತೇ ರೈತರು 1 ಲಕ್ಷ ಎಕರೆ ಜಮೀನು ಕಳೆದುಕೊಳ್ಳಬೇಕಾಗುತ್ತದೆ. ಅದರಲ್ಲಿ 70 ಸಾವಿರ ಎಕರೆ ಆಲಮಟ್ಟಿ ಯೋಜನೆಯಲ್ಲಿ ಮುಳುಗಿದರೇ ಉಳಿದ 30 ಸಾವಿರ ಎಕರೆ ಜಮೀನು ಪುನವಸತಿ ಕೇಂದ್ರಗಳ ನಿರ್ಮಾಣಕ್ಕಾಗಿ ಜಮೀನು ಅಗತ್ಯವಾಗಿದೆ. ಆಲಮಟ್ಟಿ ಜಲಾಶಯ ಎತ್ತರದಿಂದ ಬೆಳಗಾವಿ ಜಿಲ್ಲೆಯ 5 ಗ್ರಾಮಗಳು, ಬಾಗಲಕೋಟೆ ಜಿಲ್ಲೆಯ 3 ಗ್ರಾಮಗಳು ಮತ್ತೇ ಮುಳಗಡೆಯಾಗಲಿವೆ. ಜಮೀನು ಕಳೆದುಕೊಳ್ಳುವ ರೈತರು ಒಂದು ಸೂರಿನ ಅಡಿಯಲ್ಲಿ ಕನಿಷ್ಠ ಎಂದು ಎಕರೆಗೆ 50 ಲಕ್ಷ ರೂ.ಗಳನ್ನು ನೀಡಬೇಕೆಂಬ ಬೇಡಿಕೆಯಿದೆ. ಜಮೀನು ಭೂಸ್ವಾಧೀನ ಮತ್ತು ಪುನವಸತಿ ಕೇಂದ್ರಗಳ ನಿರ್ಮಾಣಕ್ಕೆ 35,000 ಕೋಟಿ ವೆಚ್ಚ ತಗಲುವ ಸಾಧ್ಯತೆಯಿದೆ ತಜ್ಞರು ಅಂಕಿ–ಅಂಶ ಮಾಹಿತಿ ನೀಡಿದರೇ, ಸರಕಾರ 2,00,000 ಕೋಟಿ ಅಗತ್ಯವಾಗಿದೆ ಎಂದು ರಾಜ್ಯ ಸರಕಾರ ಹೇಳುತ್ತಿದ್ದು ಇದರಲ್ಲಿ ಸ್ಪಷ್ಟತೆ ಇಲ್ಲವಾಗಿದೆ. ಈ ಹಿಂದೆ ಮಾಡಿದ ತಪ್ಪುಗಳನ್ನು ಮಾಡಲು ರೈತರು ಈಗ ಸಿದ್ಧರಿಲ್ಲ. ಈಗಾಗಲೇ ಅಧಿವೇಶನದಲ್ಲಿ ಕೂಡ ಚರ್ಚೆಗಳು ನಡೆದಿದೆ. ನೀರಾವರಿ ಸಚಿವರು ಹೆಚ್ಚಿನ ಆಸಕ್ತಿ ತೋರುತ್ತಿರುವ ಹಿನ್ನಲೆಯಲ್ಲಿ ರೈತರಲ್ಲಿ ಮಂದಹಾಸ ಮೂಡಿಸಿದೆ.

**ಕೃಷ್ಣೆಗೆ ಆರತಿ ಏಕೆ......**

ನಮ್ಮ ಭಾಗದ ಜೀವನಾಡಿ, ಭಗೀರಥ ಭಾಗ್ಯದೇವತೆಯಾದ ಕೃಷ್ಣೆಗೆ ಆರತಿ ಗೌರವಿಸುತ್ತಿರುವದು ಯಾಕೆ ಅಂತ ಮನದಲ್ಲಿ ಪ್ರಶ್ನೆ ಮೂಡಬಹುದು. ಪೌರಾಣಿಕ ಕಾಲದಿಂದ ಉಲ್ಲೇಖಗೊಂಡಿರುವ ಕೃಷ್ಣಾನದಿಗೆ ತನ್ನದೇಯಾದ ಐತಿಹಾಸಿಕ ವಿಶೇಷತೆಯನ್ನು ಪಡೆದುಕೊಂಡಿದೆ. ಉತ್ತರಭಾರತದಲ್ಲಿ ಗಂಗಾಮಾತೆ ಹೇಗೆ ಪವಿತ್ರ ಸ್ಥಾನವನ್ನು ಪಡೆದುಕೊಂಡಿದ್ದಾಳೆ ಅದೇ ರೀತಿಯಲ್ಲಿ ದಕ್ಷಿಣಭಾರತದ ಕೃಷ್ಣೆ ಅಷ್ಟೇ ಪವಿತ್ರ ಸ್ಥಾನ ಪಡೆದುಕೊಂಡಿದ್ದಾಳೆ. ದಕ್ಷಿಣ ಕರ್ನಾಟಕದಲ್ಲಿ ಕಾವೇರಿ ನದಿಗೆ ಗೌರವಿಸುವ ಸಂಸ್ಕೃತ ಹೆಚ್ಚಾಗಿದ್ದು ಜನರಿಂದ, ಸರಕಾರದಿಂದ ಪೂಜಿಸಲ್ಪಡುತ್ತದೆ. ಆದರೇ ಉತ್ತರಕರ್ನಾಟಕ ಪೂರ್ವದಿಕ್ಕಿನಿಂದ 1400 ಕಿ.ಮೀ. ದೂರವರೆಗೆ ಮೈದುಂಬಿ ಹರಿದು ಸಾಗುವ ಕೃಷ್ಣೆಗೆ ಗೌರವಿಸುವ ಮತ್ತು ಪೂಜಿಸುವ ಸಂಸ್ಕೃತಿ ಇಲ್ಲವಾಗಿದೆ. ಕೃಷ್ಣಾನದಿ ಮೂಲಕ ನಮ್ಮೆಲ್ಲರ ಜೀವನ ಸಾಗುತ್ತಿದೆ. ಆ ನದಿ ನಮ್ಮ ಭಾಗದಲ್ಲಿ ಹರಿಯದಿದ್ದರೇ ನಮ್ಮೆಲ್ಲರ ಪರಿಸ್ಥಿತಿ ಏನಾಗುತ್ತಿತು ಎಂದು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಿರುವಾಗ ಹಿಂದೆ ಆಗಿರುವ ಪ್ರಮಾದಗಳನ್ನು ಬಿಟ್ಟು ಇಂದು ನಾವೆಲ್ಲರೂ ಕೃಷ್ಣಾನದಿಯನ್ನು ಗೌರವಿಸುವ ಮೂಲಕ ನದಿಯ ಪರಂಪರೆ ನಾವೆಲ್ಲರೂ ಆಚರಣೆಯಲ್ಲಿ ತರಬೇಕಾಗಿದೆ. ಯಾರು ಆರಂಭಿಸುತ್ತಾರೆ ಎಂಬುವದು ಮುಖ್ಯವಲ್ಲ. ಆರಂಭಗೊಂಡಿರುವ ಕೃಷ್ಣಾರತಿ ವ್ಯವಸ್ಥೆಯನ್ನು ಬಲಪಡಿಸುವ ಅದಕ್ಕೆ ನಮ್ಮೆಲ್ಲರ ಶಕ್ತಿಯನ್ನು ಧಾರೆ ಎರದು ಕೃಷ್ಣೆಯ ಇತಿಹಾಸ ಮತ್ತು ಸಲ್ಲುವ ಗೌರವವನ್ನು ಮುಂದಿನ ಪೀಳಿಗೆಗೆ ನೀಡಬೇಕಾಗಿರುವ ನಮ್ಮೆಲ್ಲರ ಕರ್ತವ್ಯವಾಗಬೇಕಾಗಿದೆ.

## ಭವವಿಲ್ಲದೆ ಬದುಕುವ ದೇಶ ನಮ್ಮದಾಗಿದೆ : ಶ್ವೇತಾ ಬಿಡೀಕರ

ಜಮಖಂಡಿ: ವಿವಿಧ ಭಾಷೆಗಳು. ವಿವಿಧ ಜಾತಿಗಳನ್ನು ಹೊಂದಿದೆ ದೇಶ ಏಕತೆಯನ್ನು ಹೊಂದಿದ ದೇಶವಾಗಿದೆ

ಗಾಂಧಿಯವರ ಚಳವಳಿಯಲ್ಲಿ ಭಾಗಿದ ವಿವಿಧ ಮಹನೀಯರನ್ನು ಸ್ಮರಿಸುವ ದಿನವಾಗಿದೆ. ಭವವಿಲ್ಲದೆ ಬದುಕುವ ದೇಶ ನಮ್ಮದಾಗಿದೆ. ನಮ್ಮ ದೇಶ ಸಮಸಮಾಜವನ್ನು ಹೊಂದಿದೆ ದೇಶ. ಧರ್ಮ ಅಹಿಂಸಾ ಧರ್ಮವನ್ನು ಹೊಂದಿದೆ. ಜಾತಿ. ಭೇದ. ಲಿಂಗ ಭೇದವಿಲ್ಲದೆ ಉತ್ಸಾಹದಿಂದ ಆಚರಿಸುವ ಹಬ್ಬವಾಗಿದೆ ಎಂದು ಉಪವಿಭಾಗಾಧಿಕಾರಿ ಶ್ವೇತಾ ಬಿಡೀಕರ ಹೇಳಿದರು.

ನಗರದ ತಾಲೂಕಾ ಕ್ರೀಡಾಂಗಣದಲ್ಲಿ ನಡೆದ 79ರ ಸ್ವಾತಂತ್ರ್ಯ ದಿನಾಚರಣೆ ಧ್ವಜಾರೋಹಣ ನೇರವೇರಿಸಿ. ಮಾತನಾಡಿದ ಅವರು 78 ಸ್ವಾತಂತ್ರ್ಯ ದಿನವನ್ನು ಉಂಡು.79 ರಲ್ಲಿ ಪಾದಾರ್ಪಣೆ ಮಾಡುತ್ತಿದೆವೆ.ಸ್ವಾತಂತ್ರ್ಯ ದಿನಾಚರಣೆಯು ಭಾರತೀಯನ ಪ್ರತಿಯೊಬ್ಬನ

ಜವಾಬ್ದಾರಿ ದಿನವಾಗಿ.ಭಾರತ ದೇಶವು ನಮ್ಮಗೆ ಒಳ್ಳೆಯ ದಾರಿ. ಸ್ವಚ್ಛತೆ.ಬದುಕು ಹೀಗೆ



ಹಲವಾರು ಸ್ವಾತಂತ್ರ್ಯವನ್ನು ನೀಡಿದ ದಿನ. ರಾಷ್ಟ್ರ ನಾಯಕರ ಸ್ಮರಿಸುವ ದಿನ. 7 ದಶಕಗಳ ಮೇಲೆ ನಿಂತಿರುವದು ನಮ್ಮ ಸಂವಿಧಾನದ ಮೇಲೆ ನಿಂತಿದೆ. ಸಂವಿಧಾನದಲ್ಲಿ ಕಾನೂನು. ಮೂಲಭೂತ ಸೌಕರ್ಯ.

ಬದ್ಧತೆಯನ್ನು ಹೊಂದಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವೆ ಕಾರಣ ಇಂದು ನಾವೆಲ್ಲರೂ ಸಂವಿಧಾನದ ಮೇಲೆ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ. ನಮ್ಮ ದೇಶ ಪ್ರಜಾಪ್ರಭುತ್ವದಿಂದ ಯಶಸ್ವಿಯಾದ ದೇಶ. ಉತ್ತಮ ಆಡಳಿತವನ್ನು ಮುಂದುವರಿದೆ.ನಮ್ಮ ದೇಶ ಹೆಮ್ಮೆಯ ದೇಶವಾಗಿದೆ. ಆದರೆ ನಮ್ಮೊಟ್ಟಿಗೆ ಹುಟ್ಟಿದ ದೇಶಗಳು ಇಂದಿಗೂ ಸಹ ತಿನ್ನುವ ಆಹಾರದ ಕೊರತೆಯಿಂದ ಹಾಗೂ ಮೂಲಭೂತ ಸೌಕರ್ಯಗಳಿಂದ

ಬಳಲುತ್ತಿವೆ. ಆದರೆ ನಮ್ಮ ದೇಶ ಸಮಸಮಾಜವನ್ನು ಹೊಂದಿದೆ ದೇಶ. ಅಹಿಂಸಾ ಧರ್ಮವನ್ನು ಹೊಂದಿದ್ದು. ವಿವಿಧ ಭಾಷೆಗಳು. ವಿವಿಧ ಜಾತಿಗಳನ್ನು ಹೊಂದಿದ್ದು. ದೇಶ ಏಕತೆಯನ್ನು ಹೊಂದಿದ ದೇಶವಾಗಿದೆ. ಜಾತಿ. ಭೇದ. ಲಿಂಗ ಭೇದವಿಲ್ಲದೆ ಉತ್ಸಾಹದಿಂದ ಆಚರಿಸುವ ಹಬ್ಬವಾಗಿದೆ. ಗಾಂಧಿಯವರ ಚಳವಳಿಯಲ್ಲಿ ಭಾಗಿದ ವಿವಿಧ ಮಹನೀಯರನ್ನು ಸ್ಮರಿಸುವ ದಿನ. ಭವವಿಲ್ಲದೆ ಬದುಕುವ ದೇಶವಾಗಿದೆ. ಶಿಸ್ತು. ಬದ್ಧತೆಯನ್ನು. ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ನೀಡಿದ ದಿನವಾಗಿದೆ ಎಂದರು.

ಪೋಲಿಸ ಇಲಾಖೆ. ಹೊಂ ಗಾರ್ಡ ಸೇರಿದಂತೆ ವಿವಿಧ ಶಾಲಾ. ಕಾಲೇಜಿನ ವಿದ್ಯಾರ್ಥಿ.ವಿದ್ಯಾರ್ಥಿನಿಯರ ಸೇರಿದಂತೆ 21 ತಂಡ ಪತಸಂಚಲನದಲ್ಲಿ ಪಾಲ್ಗೊಂಡಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನಿಸಿ. ಗೌರವಿಸಿದರು.

ತಹಶೀಲ್ದಾರ ಅನೀಲ ಬಡಿಗೇರ ಸ್ವಾಗತಿಸಿದರು. ಡಿಎಸ್ ಪಿ.ಸೈಯದ್ ರೋಷನ್ ಜಮೀರ್. ನಗರಸಭೆ ಪೌರಾಯುಕ್ತ ಜೋತಿ ಗಿರೀಶ.ಬಿಇಒ ಅಶೋಕ ಬಸನ್ನವರ. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಜಗದೀಶ ಪಾಸೋಡೆ. ತಾ.ಆರೋಗ್ಯ ಇಲಾಖೆ ಅಧಿಕಾರಿ ಗೈಬುಸಾಬ ಗಲಗಲಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು. ನಗರಸಭೆಯ ಅಧ್ಯಕ್ಷ ಈಶ್ವರ ವಾಳೇನ್ನವರ ಹಾಗೂ ನಗರಸಭೆಯ ಸದಸ್ಯರು ವೇದಿಕೆಯಲ್ಲಿ ಇದ್ದರು.

## ಸೈನಿಕ ರೈತ ಧರ್ಮಾಧಿಕಾರಿಗಳಿಗೆ ಗೌರವಿಸಿ: ಬಸವಲಿಂಗ.ಶ್ರೀ

ಮುಧೋಳ: ಭಾರತ ದೇಶದ ಸೈನಿಕ, ರೈತ ಮತ್ತು ಧರ್ಮ ಪಾಲನೆ ಮಾಡುವ ಧರ್ಮಾಧಿಕಾರಿಗಳಿಗೆ ಮೊದಲ ಆದ್ಯತೆ ಮೇರೆಗೆ ಇವರನ್ನು ಪ್ರತಿಯೊಬ್ಬರಿಂದ ಗೌರವಿಸುವ ಕಾರ್ಯ ಆಗಬೇಕಾಗಿದೆ. ಎಂದು ವಿರಕ್ತಮಠ–ಗವಿಮಠದ ಬಸವಲಿಂಗ ಶ್ರೀಗಳು ಹೇಳಿದರು.

ಸ್ಥಳಿಯ ವಿರಕ್ತಮಠದ ಗುರು ಮೃತ್ಯುಂಜಯ ಪ್ರಾಥಮಿಕ/ಪ್ರೌಢ ಶಾಲೆಯಲ್ಲಿ ಜರುಗಿದ 79.ನೇಯ ಸ್ವಾತಂತ್ರೋತ್ಸವದ ದಿನಾಚರಣೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಬ್ರಿಟಿಷರು ಈ ದೇಶವನ್ನು ಬಿಡುವಾಗ ನಮಗೆ ಚಹಾ–ಕಾಫಿ, ಅಲ್ಕೋಹಾಲ್‌ನಂತಹ ಇತರೆ ದುರಭ್ಯಾಸಗಳನ್ನು ಬಿಟ್ಟು ಹೋದರು, ಕಾರಣ ಇವುಗಳ ದಾಸಕ್ಕೆ ಒಳಗಾಗಿ ದೇಶ ಮುಂದುವರೆಯಬಾರದು ಎಂಬ ಅವರ ದುರುದ್ದೇಶವಿತ್ತು, ಕಾರಣ ನಮ್ಮ ಭಾರತೀಯ ಪರಂಪರೆ, ಸಂಸ್ಕೃತಿ ಅಳವಡಿಸಿಕೊಂಡು ನಡೆದು, ಅನೇಕತೆಯಲ್ಲಿ ಏಕತೆ ಕಂಡು ಯಶಸ್ವಿ ಪ್ರಜಾಪ್ರಭುತ್ವ ದೇಶ ವಿಶ್ವದಲ್ಲಿ ಯಾವುದಾದರು ಇದ್ದರೆ ಅದು ನಮ್ಮ ಭಾರತ ದೇಶ ಎಂದರು.

ಸಂಸ್ಥೆಯ ಪ್ರ.ಕಾ. ದುಂಡಯ್ಯ ಸೈದಾಪುರಮಠ, ಮು.ಗು. ಬಸಯ್ಯ ಗಣಾಚಾರಿ, ಎಸ್.ಆರ್. ಪರಾಸ,



ಮಹಾದೇವ ಗೋಟೆ, ಪ್ರಾಚಾರ್ಯ ಪ್ರಭು ನಾವಿ, ಮಲ್ಲಿಕಾರ್ಜುನ ಕುಂಬಾರ, ಲಕ್ಷ್ಮೀ ಪಾಟೀಲ, ಪತ್ರಕರ್ತ ಬಿ.ಎಚ್.ಬೀಳಗಿ, ವಾಯ್.ಡಿ. ಹಂಚನಾಳ ಇತರರಿದ್ದರು.

### ಅಕ್ಟೋಬರ್ ನಲ್ಲಿ ಅಂಗನವಾಡಿ ಸುವರ್ಣ ಮಹೋತ್ಸವ ಕಾರ್ಯಕ್ರಮ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್

## ಎಲ್ಲೂರಿನ ಅಂಗನವಾಡಿ ಕೇಂದ್ರ ಉದ್ಘಾಟಿಸಿದ ಸಚಿವರು



ಉಡುಪಿ: ಅಂಗನವಾಡಿಗಳು ಆರಂಭವಾಗಿ 50 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಅಕ್ಟೋಬರ್ 2ರ ಹೊತ್ತಿಗೆ ಸುವರ್ಣ ಮಹೋತ್ಸವ ಆಚರಿಸಲು ಸಿದ್ಧತೆ ಮಾಡಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಉಡುಪಿ ಜಿಲ್ಲಾಡಳಿತ, ಉಡುಪಿ ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾಪು ತಾಲೂಕು ಪಂಚಾಯತ್ ವತಿಯಿಂದ ಎಲ್ಲೂರಿನ ದುರ್ಗಾನಗರದಲ್ಲಿ ನೂತನವಾಗಿ ನಿರ್ಮಿಸಿರುವ ಅಂಗನವಾಡಿ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಮತ್ತಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ ಎಲ್‌ಕೆಜಿ ಹಾಗೂ ಯುಕೆಜಿಯನ್ನು ಪ್ರಾರಂಭಿಸಲಾಗುತ್ತದೆ ಎಂದರು.

ರಾಜ್ಯದಲ್ಲಿ 70 ಸಾವಿರ ಅಂಗನವಾಡಿ ಕೇಂದ್ರಗಳಿದ್ದು, ಹಂತ ಹಂತವಾಗಿ ಎಲ್ಲಾ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಪೂರ್ವ ಪ್ರಾಥಮಿಕ ಹಂತದಲ್ಲಿ ಎಲ್‌ಕೆಜಿ/ಯುಕೆಜಿ ಆರಂಭಿಸಲಿರುವ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೂ ಕರ್ನಾಟಕ ಪಾತ್ರವಾಗಲಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಸಮಾರಂಭದಲ್ಲಿ ಕಾಪು ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ವಿಧಾನ ಪರಿಷತ್ ಸದಸ್ಯರಾದ ಕಿಶೋರ್ ಕುಮಾರ್, ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಸಿಇಒ ಪ್ರತೀಕ್ ಬಾಯಲ್, ಉಪ ವಿಭಾಗಧಿಕಾರಿ ಎಸ್.ಆರ್. ರಶ್ಮಿ, ತಹಶಿಲ್ದಾರ್ ಪ್ರತಿಭಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಶ್ಯಾಮಲಾ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 07, Issue :164, Postal Reg No. PMG/KA/NK/BM/135/25-27 / POST AT Vantamury Colony Post Office